# ಬೃಹಚ್ಚರಣ

ಸಂಘದ ತ್ರೈಮಾಸಿಕ ವಾರ್ತಾ ಪತ್ರಿಕೆ



**ಸಂಘದ ಸದಸ್ಯರಾಗಿ**

| | |
|---|---|
| ಮಹಾ ಪೋಷಕರು | – ₹ 25,000/– |
| ಪೋಷಕರು | – ₹ 5,000/– |
| ಸದಸ್ಯತ್ವ | – ₹ 1,000/– |
| ವಾರ್ಷಿಕ ನಿರ್ವಹಣೆ | – ₹ 500/– |



ಸಂಪುಟ : 11 ಸಂಚಿಕೆ : 2 ಖಾಸಗಿ ಪ್ರಸಾರಕ್ಕಾಗಿ ಜುಲೈ 2020–ಜನವರಿ 2021


## ಸಂಘದ ಸರ್ವಸದಸ್ಯರ ಸಭೆಯ ವಿಶೇಷಾಂಕ



### ಕಾರ್ಯದರ್ಶಿ ನುಡಿ

ಮಾನ್ಯರೇ, ಬೃಹಚ್ಚರಣ ಸಂಘದ ಎಲ್ಲ ಸದಸ್ಯರು ಹಾಗೂ ನಮ್ಮ ಸಮುದಾಯದ ಹಿತೈಷಿಗಳಿಗೆ ನೂತನ ವರ್ಷ 2021ರ ಹಾರ್ದಿಕ ಶುಭಾಶಯಗಳು.

ಕಳೆದ ವರ್ಷದಲ್ಲಿ ನಮ್ಮ ಸಂಘದ ವತಿಯಿಂದ ನಡೆಯಬೇಕಿದ್ದ ಕೆಲವು ಕಾರ್ಯಕ್ರಮಗಳು 'ಕರೋನ' ಮಹಾಮಾರಿಯ ಉಪಟಳದಿಂದಾಗಿ ರದ್ದುಗೊಳಿಸಲಾಯ್ತು. ಇದರ ನಡುವೆಯೂ ಡಿಸೆಂಬರ್ ತಿಂಗಳ 19ನೇ ತಾರೀಖಿನಂದು ಸರ್ವಸದಸ್ಯರ ಸಭೆಯು ಸುಗಮವಾಗಿ ನಡೆಯಿತು. ಈ ಸಭೆಯಲ್ಲಿ ಪಾಲ್ಗೊಂಡ ಎಲ್ಲ ಸದಸ್ಯರಿಗೂ ಧನ್ಯವಾದಗಳು.

ಮುಂದಿನ ದಿನಗಳಲ್ಲಿ ಈ ಮಹಾಮಾರಿ ಕರೋನದ ಅಂತ್ಯವಾಗಿ ಎಂದಿನಂತೆ ಸಂಘದ ಎಲ್ಲ ಕಾರ್ಯಕ್ರಮಗಳು, ಯೋಜನೆಗಳು ಯಶಸ್ವಿಯಾಗಿ ಪೂರ್ಣವಾಗಲಿ ಎಂದು ಆಶಿಸುತ್ತೇನೆ.

ಸಂಘದ ಸದಸ್ಯರು, ಸಮುದಾಯದ ಎಲ್ಲ ಬಂಧುಗಳಿಗೂ ಭಗವಂತ ಆಯುರಾರೋಗ್ಯ ಕರುಣಿಸಿ ಎಂದಿನಂತೆ ಸಂಘದ ಅಭಿವೃದ್ಧಿಗೆ ಹೆಚ್ಚಿನ ಕೊಡುಗೆ, ಪ್ರೋತ್ಸಾಹ ನೀಡುವಂತಾಗಲಿ.

ಕಳೆದ ಹತ್ತು ವರ್ಷಗಳಲ್ಲಿ ನಮ್ಮ ಸಂಘದ ಉನ್ನತಿಗಾಗಿ ಶ್ರಮಿಸಿದ ಎಲ್ಲ ಸದಸ್ಯರು, ಸಮುದಾಯದ ಹಿತೈಷಿಗಳು, ಕಾರ್ಯಕಾರಿ ಸಮಿತಿಯ ಸಹೋದ್ಯೋಗಿಗಳು, ನಿಕಟಪೂರ್ವ ಅಧ್ಯಕ್ಷರು, ಕಾರ್ಯದರ್ಶಿಗಳಿಗೆ ಅನಂತಾನಂತ ಧನ್ಯವಾದಗಳು.

ತಾರೀಖು 18.03.2021ನೇ ಗುರುವಾರದಂದು ನಡೆಯಲಿರುವ 'ನಾಗಾರಾಧನೆ' ಕಾರ್ಯಕ್ರಮದಲ್ಲಿ ಸಮುದಾಯದ ಕುಟುಂಬದವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಭಗವಂತ ಕೃಪೆಗೆ ಪಾತ್ರರಾಗಲು ವಿನಂತಿ.



**ಎಸ್.ಸಿ. ಶ್ರೀನಿವಾಸ್**
ಕಾರ್ಯದರ್ಶಿ

### ಅಧ್ಯಕ್ಷರ ನುಡಿ

ಬಂಧುಮಿತ್ರರೇ, ಆದರಪೂರ್ವಕ ನಮಸ್ಕಾರಗಳು.

ಮುಂಬರುವ ಮಹಾಶಿವರಾತ್ರಿ ಮತ್ತು ಶ್ರೀ ಪ್ಲವನಾಮ ಸಂವತ್ಸರದ ಯುಗಾದಿ ಹಬ್ಬದ ಶುಭಾಶಯಗಳು.

ನಿಮ್ಮ ಸಹಕಾರ ಮತ್ತು ಪಾಲ್ಗೊಳ್ಳುವಿಕೆಯಿಂದ 2019–20ನೇ ಸಾಲಿನ ಸರ್ವಸದಸ್ಯರ ಸಭೆಯು ಕಳೆದ ಡಿಸೆಂಬರ್ ತಿಂಗಳ 19ನೇ ತಾರೀಖು ಶನಿವಾರ ಬೆಂಗಳೂರಿನ ಶ್ರೀ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನದ "ಭ್ರಮರಾಂಬಿಕ ಮಂಗಳಸದನ"ದಲ್ಲಿ ಸುಸೂತ್ರವಾಗಿ ಜರುಗಿತು. ಸಭೆಯ ಬಗ್ಗೆ ವರದಿ ಈ ಸಂಚಿಕೆಯ ಒಳಪುಟದಲ್ಲಿ ಪ್ರಕಟವಾಗಿದೆ.

2019ರಲ್ಲಿ ಸಂಘವು ಸಂಕಲ್ಪಿಸಿದ್ದ ಸದಸ್ಯರ ವಿವರಗಳುಳ್ಳ ಕೈಪಿಡಿ (Members Directory)ಯನ್ನು ಹೊರತರುವ ನಿಟ್ಟಿನಲ್ಲಿ ಕೆಲಸ ಪ್ರಗತಿಯಲ್ಲಿದೆ. ಕೈಪಿಡಿಯು ತಪ್ಪುಗಳಿಂದ ಮುಕ್ತವಾಗಿರಲೆಂಬ ಉದ್ದೇಶದಿಂದ ಸದಸ್ಯರ ವಿವರಗಳು ಪರಿಷ್ಕೃತಗೊಳ್ಳುತ್ತಲಿದ್ದು, ಆ ಕೆಲಸ ಪೂರ್ಣವಾಗುವ ಹಂತದಲ್ಲಿದೆ.

ಸದಸ್ಯರ ಹೆಸರು, ವಿಳಾಸ, ಟೆಲೆಫೋನ್ ನಂ., ಮೊಬೈಲ್ ನಂ. ಮತ್ತು ಇ–ಮೇಲ್ ವಿವರಗಳನ್ನು ಒಳಗೊಳ್ಳಲಿರುವ ಕೈಪಿಡಿಯು ಸದಸ್ಯರೆಲ್ಲರಿಗೆ ಉಪಯುಕ್ತವಾಗುವುದರಲ್ಲಿ ಸಂದೇಹವಿಲ್ಲ.

ಈ ಕೈಪಿಡಿಯ ಪ್ರಕಟಣೆಯ ವೆಚ್ಚವನ್ನು ಭರಿಸಲು ಈಗಾಗಲೇ ಹಲವಾರು ಸದಸ್ಯರು ದೇಣಿಗೆ ನೀಡಿರುತ್ತಾರೆ. ಇನ್ನೂ ಕೆಲವರು ನೀಡಲಿದ್ದಾರೆ. ಸಂಘವು ಈ ಸದಸ್ಯರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತದೆ.

ಸಂಘದ ಜಾಲತಾಣ (Website) ನಿರ್ಮಾಣದ ಕೆಲಸ ಪ್ರಗತಿಯಲ್ಲಿದ್ದು ಇನ್ನೆರಡು ತಿಂಗಳಲ್ಲಿ ಪೂರ್ಣವಾಗುವ ನಿರೀಕ್ಷೆ ಇದೆ.

ಸುದ್ದಿಗಳನುಸಾರ ಕೊವಿಡ್–19 ಪಿಡುಗಿನ ನಿವಾರಣೆಗಾಗಿ ಲಸಿಕೆ ಲಭ್ಯವಾಗುವುದರಲ್ಲಿದೆ. ಇದರಿಂದ ಈ ಪಿಡುಗಿನ ಭೀತಿ ಇಲ್ಲವಾಗಿ 2021ರಲ್ಲಿ ಸಂಘದ ಕಾರ್ಯಚಟುವಟಿಕೆಗಳು ಎಂದಿನಂತೆ ಅಡೆತಡೆಗಳಿಲ್ಲದೇ ಜರುಗುವುವೆಂದು ಆಶಿಸುತ್ತೇನೆ.

ಎಲ್ಲರಿಗೂ ಒಳ್ಳೆಯದಾಗಲಿ!




**ಬಿ. ಸುಬ್ರಹ್ಮಣ್ಯಂ**
ಅಧ್ಯಕ್ಷರು

### ಸಂಪಾದಕೀಯ

ನಮಸ್ಕಾರ,

ವಾರ್ತಾಸಂಚಿಕೆ ಉತ್ತಮವಾಗಿ ಬರುತ್ತಿರುವುದಕ್ಕೆ ತಮ್ಮೆಲ್ಲರ ಸಹಕಾರಕ್ಕೆ ವಂದನೆಗಳು. ಇದೇ ರೀತಿ ತಮ್ಮ ಸಹಕಾರ ಮುಂದುವರೆಸಲು ಕೋರಿಕೆ. ಸದಸ್ಯರು ಉತ್ತಮ ಲೇಖನ ಹಾಗೂ ಚಿತ್ರಗಳನ್ನು ಕಳುಹಿಸಲು ಬಿನ್ನಹ. ನಿಮ್ಮ ಅನಿಸಿಕೆ ತಿಳಿಸಿ.



**ಕೆ.ಸಿ. ನಟರಾಜ್**
ಸಂಪಾದಕ


9845113475
mmdbs.mag@gmail.com

# ಅಭಿನಂದನೆಗಳು



**ಶ್ರೀ ಹೆಚ್.ಎಸ್. ಸಚ್ಚಿದಾನಂದಮೂರ್ತಿಯವರು ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿ ಕರ್ನಾಟಕ ಸರ್ಕಾರದಿಂದ ನೇಮಕಗೊಂಡಿದ್ದಕ್ಕೆ ಮೈಸೂರು ಮಂಜಪತ್ತೂರು ದ್ರಾವಿಡ ಬೃಹಚ್ಚರಣ ಸಂಘದ ಅಭಿನಂದನೆಗಳು. ಶ್ರೀಯುತರು ಅಧ್ಯಕ್ಷರಾಗಿ ಆಯ್ಕೆಯಾದ ಕೆಲವು ದಿನಗಳಲ್ಲೇ ಬ್ರಾಹ್ಮಣ ವಿದ್ಯಾರ್ಥಿಗಳಿಗಾಗಿ "ಸಾಂದೀಪನಿ ಶಿಷ್ಯ ವೇತನ" ಮತ್ತು "ಕಲ್ಯಾಣ ಕರ್ನಾಟಕ" ಎಂಬ ಅಡಿಯಲ್ಲಿ ಐ.ಎ.ಎಸ್ ಮತ್ತು ಐ.ಪಿ.ಎಸ್ ತರಬೇತಿ ನೀಡಲು ನಿರ್ಧರಿಸಿ ಅದಕ್ಕಾಗಿ ಕರ್ನಾಟಕದಾದ್ಯಂತ ಅರ್ಜಿಯನ್ನು ಆಹ್ವಾನಿಸಿರುವುದು ಅತ್ಯಂತ ಶ್ಲಾಘನೀಯ ಕಾರ್ಯ. ಅದಲ್ಲದೇ ಬ್ರಾಹ್ಮಣ ಸಮುದಾಯಕ್ಕಾಗಿ ಸಾಮೂಹಿಕ ಉಪನಯನ ಮತ್ತು ವಿವಾಹ ನಡೆಸಲು ಉದ್ದೇಶಿಸಿರುವುದು ಅತ್ಯಂತ ಉತ್ತಮ ನಿರ್ಧಾರ.**

**ಅಧ್ಯಕ್ಷರು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರು**

## ಸುದ್ದಿ ಚಿತ್ರಗಳು



ಸಂಘದ ಸದಸ್ಯ ಸೇಲಂ ಸುಬ್ರಹ್ಮಣ್ಯಂ, ಶ್ರೀಮತಿ ನಾಗಕುಮಾರಿ ರವರ ಪುತ್ರಿ **ಕು॥ ಅರ್ಚನಾ**ರವರ ವಿವಾಹವು ಶ್ರೀ ಮೋಹನ ಮತ್ತು ಶ್ರೀಮತಿ ಜ್ಯೋತಿರವರ ಪುತ್ರ **ಚಿ॥ ಮುಕುಲ್**ರವರೊಂದಿಗೆ ದಿನಾಂಕ 12–7–2020 ರಂದು ಬೆಂಗಳೂರಿನಲ್ಲಿ ನೆರವೇರಿತು.



ಸಂಘದ ಪೋಷಕರಾದ ಶ್ರೀ ಆರ್.ಎಸ್. ರಮೇಶ್ ಮತ್ತು ಶ್ರೀಮತಿ ರೇಖಾ ರವರ ಪುತ್ರಿ **ಚಿ. ಸೌ. ರಚಿತಾ**ರವರ ವಿವಾಹವು **ಚಿ. ಚೇತನ ಅಮರ್‌ನಾಥ್**ರವರೊಂದಿಗೆ ದಿನಾಂಕ 29.10.2020ರಂದು ಬೆಂಗಳೂರಿನಲ್ಲಿ ನೆರವೇರಿತು.



ಸಂಘದ ಸದಸ್ಯ ಚಂದ್ರಶೇಖರ್ ಮತ್ತು ಶ್ರೀಮತಿ ವಿಜಯಾರವರ ಪುತ್ರಿ **ಡಾ. ಚಿ॥ಸೌ॥ ಅರ್ಷಿತಾ ಎಂ.ಡಿ.**ರವರು, ಬಿಜಾಪುರದ **ಚಿ॥ ವೀನಿತ್** ಅವರನ್ನು ದಿನಾಂಕ 2.12.2020 ಬೆಂಗಳೂರಿನಲ್ಲಿ ವಿವಾಹವಾದರು.



ಸಂಘದ ಕಾರ್ಯಕಾರಿ ಸಮಿತಿ ಸದಸ್ಯ **ಶ್ರೀ ಟಿ.ಪಿ. ಸೂರ್ಯನಾರಾಯಣ**ರವರಿಗೆ ಅತ್ಯುತ್ತಮ ಕಾರ್ಯ ನಿರ್ವಹಣೆಗಾಗಿ LIC ನಿಗಮದ ಅಧಿಕಾರಿಗಾಳದ ಶ್ರೀ ಮಂಜುನಾಥ್ ಹಾಗೂ ಶ್ರೀ ಹೆಚ್.ಕೆ. ಶಶಿಧರ್‌ರವರಿಂದ ಪಾರಿತೋಷಕವನ್ನು ನೀಡಲಾಗಿದೆ



ಸದಸ್ಯೆ ಶ್ರೀಮತಿ ನಿರ್ಮಲ, ಶ್ರೀ ರಾಮಕೃಷ್ಣ ರವರ ಪುತ್ರ ಹಾಗೂ ಹಿರಿಯ ಸದಸ್ಯರಾದ ಆರ್.ಎಸ್. ಪದ್ಮನಾಭ್‌ರವರ ಮೊಮ್ಮಗ **ಸುಪ್ರೀತ್ ರಾಘವೇಂದ್ರ** ಅಮೆರಿಕಾದ ಕ್ಲೆಂಸನ್ ವಿಶ್ವವಿದ್ಯಾನಿಲಯದಲ್ಲಿ ಕಂಪ್ಯೂಟರ್ ವಿಜ್ಞಾನದಲ್ಲಿ ಎಂ.ಎಸ್. ಪದವಿ ಪಡೆದಿರುತ್ತಾರೆ.



ಸಂಘದ ಸದಸ್ಯ ವಿ. ನರಸಿಂಹನ್‌ರವರ ಪುತ್ರ **ಎನ್. ವಿಶ್ವಾಸ್** ಬಿ.ಇ. ಎಲೆಕ್ಟ್ರಿಕಲ್ ಹಾಗೂ ಎಲೆಕ್ಟ್ರಾನಿಕ್ಸ್‌ನಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿರುತ್ತಾರೆ.

## ಮೈ.ಮಂ.ದ್ರಾ. ಬೃಹಚ್ಚರಣ ಸಂಘ

(ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಂಗ ಸಂಸ್ಥೆ)

**ಕಾರ್ಯಕಾರಿ ಸಮಿತಿ**

ಶ್ರೀಯುತರುಗಳಾದ

**ಬಿ. ಸುಬ್ರಹ್ಮಣ್ಯಂ, 9449869667**
ಅಧ್ಯಕ್ಷರು

**ಎಚ್.ಕೆ. ಶಶಿಧರ್, 9845173766**
ಉಪಾಧ್ಯಕ್ಷರು

**ಎಸ್.ಸಿ. ಶ್ರೀನಿವಾಸ, 9483725949**
ಕಾರ್ಯದರ್ಶಿ

**ಅರುಣ್ ವಿ., 9880166001**
ಸಹಕಾರ್ಯದರ್ಶಿಗಳು

**ಎಸ್. ಸತ್ಯನಾರಾಯಣ, 9980945699**
ಖಜಾಂಚಿ

**ಟಿ.ಪಿ. ಸೂರ್ಯನಾರಾಯಣ, 9945484268**
ಸಹ ಖಜಾಂಚಿ

**ಸದಸ್ಯರು**

**ಎಸ್. ಸೋಮಸುಂದರ, 9900113298**
**ಕೆ.ಜಿ. ವೆಂಕಟೇಶ್, 9964012687**
**ಕೆ. ಗುಂಡಪ್ಪ, 9845332315**
**ಕೆ.ಬಿ.ಎಸ್. ಶರ್ಮ, 94820 87344**
**ಟಿ.ಎಸ್. ರಮೇಶನ್, 9663874531**
**ಸರಸ್ವತಿ ನಟರಾಜನ್, 9480619730**
**ಟಿ.ಎಸ್. ನಾಗೇಶ್, 9980662118**
**ಆರ್. ಗಣೇಶ್ ಶ್ರೀಧರ್, 9880187686**
**ಮಂಜುನಾರಾಯಣ್ ಕೆ. 9886114279**
**ಅರುಣ್ ಸೇತುರಾಮ್, 9900313929**
**ಶಂಕರಪ್ರಸಾದ್ ಬಿ.ಆರ್., 9845663833**
**ನಿತಿನ್‌ಭಾಸ್ಕರ್, 9844417333**
**ಅನಂತ ಕೆ.ಎಸ್. 9740444222**

<u>ಲೆಕ್ಕಪರಿಶೋಧಕರು</u>
**ಬಿ.ಎನ್.ಜಿ. ಪ್ರಸಾದ್, 9845128229**

**ಗೌರವ ಸಂಪಾದಕ ಮಂಡಳಿ-ಬೃಹಚ್ಚರಣ ಪತ್ರಿಕೆ**

**ಸಂಘದ ಅಧ್ಯಕ್ಷರು, ಕಾರ್ಯದರ್ಶಿ**

**ಎಸ್. ಸೋಮಸುಂದರ, 9900113298**
ನಿಕಟಪೂರ್ವ ಅಧ್ಯಕ್ಷರು

**ಕೆ.ಸಿ. ನಟರಾಜ್, 9845113475**
ಸಂಪಾದಕರು

**ಲಲಿತಾ ರಮೇಶ್, 9945199637**
ಉಪಸಂಪಾದಕಿ

**ಶಿವಕುಮಾರ್ ಎನ್., 6362337254**
ಛಾಯಾಗ್ರಾಹಕ

॥ ಶುಭಮಸ್ತು ॥

## ಶ್ರೀಭೂ-ನೀಳಾಸಮೇತ ಶ್ರೀ ಶ್ರೀನಿವಾಸ ದೇವಾಲಯ

ಶ್ರೀ ನಾಗೇಶ್ವರ ಕ್ಷೇತ್ರ, ಕಿತ್ತಿಗಾನಹಳ್ಳಿ, ಆನೇಕಲ್ ತಾಲ್ಲೂಕು.

ಶ್ರೀ ಶಾರ್ವರೀನಾಮ ಸಂವತ್ಸರ, ಫಾಲ್ಗುಣ ಶುದ್ಧ ಚತುರ್ಥಿಯಿಂದ ಶುದ್ಧ ಅಷ್ಟಮಿಯವರೆಗೆ

### ಕಾರ್ಯಕ್ರಮಗಳು

| | |
|---|---|
| **ತಾ॥ ೧೭-೩-೨೦೨೧ ಬುಧವಾರ** | ಬೆಳಿಗ್ಗೆ : ಅಭಿಷೇಕ.<br>ಸಂಜೆ ೭:೦೦ ಘಂಟೆಗೆ **ಮಹಾಗಣಪತಿ ಪೂಜೆ**<br>ಅಂಕುರಾರ್ಪಣ<br>**ಶ್ರೀವಲ್ಲಿದೇವಸೇನಾಸಮೇತ ಶ್ರೀ ಸುಬ್ರಹ್ಮಣ್ಯಸ್ವಾಮಿ ಕಲ್ಯಾಣೋತ್ಸವ** |
| **ತಾ॥ ೧೮-೩-೨೦೨೧ ಗುರುವಾರ** | ಬೆಳಿಗ್ಗೆ ಅಭಿಷೇಕ, ಸುಬ್ರಹ್ಮಣ್ಯಸ್ವಾಮಿ ಮಯೂರ ವಾಹನೋತ್ಸವ, **"ನಾಗಾರಾಧನೆ"** (ಅರವಂಟಿಗೆ ಮತ್ತು ಅನ್ನಸಂತರ್ಪಣೆ ಬೃಹಚ್ಚರಣ ಕುಟುಂಬದವರಿಂದ)<br>ಸಂಜೆ : **ಶ್ರೀ ಶ್ರೀನಿವಾಸ ಕಲ್ಯಾಣೋತ್ಸವ, ಗರುಡೋತ್ಸವ** |
| **ತಾ॥ ೧೯-೩-೨೦೨೧ ಶುಕ್ರವಾರ** | ಬೆಳಿಗ್ಗೆ ೯ ಘಂಟೆಗೆ ಗಾಯತ್ರಿ ಮತ್ತು ಸುದರ್ಶನ ಹೋಮ<br>ಮಧ್ಯಾಹ್ನ ೧೨:೩೦ರಿಂದ ೧:೦೦ ಘಂಟೆ<br>ಅಭಿಜಿನ್ ಮುಹೂರ್ತದಲ್ಲಿ **"ಬ್ರಹ್ಮರಥೋತ್ಸವ".**<br>ಸಂಜೆ : ಧೂಳೋತ್ಸವ |
| **ತಾ॥ ೨೦-೩-೨೦೨೧ ಶನಿವಾರ** | ಬೆಳಿಗ್ಗೆ "ವಸಂತೋತ್ಸವ", **ಹನುಮಂತೋತ್ಸವ**<br>ಸಂಜೆ : **ಶೇಷವಾಹನೋತ್ಸವ, ಶಯನೋತ್ಸವ** |
| **ತಾ॥ ೨೧-೩-೨೦೨೧ ಭಾನುವಾರ** | ಬೆಳಿಗ್ಗೆ ಸುಪ್ರಭಾತ ಸೇವೆ |

**॥ ಸರ್ವರಿಗೂ ಆದರದ ಸ್ವಾಗತ ॥**

ಇಂದಿನ ದಿನಗಳಲ್ಲಿ ಹರಡಿರುವ ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ಭಕ್ತಾದಿಗಳು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ನಿಗದಿಪಡಿಸಿರುವ ಮುಂಜಾಗರೂಕತಾ ಕ್ರಮಗಳನ್ನು ತಪ್ಪದೇ ಪಾಲಿಸಬೇಕೆಂದು ಕೋರಲಾಗಿದೆ.

**ಈ ವರ್ಷ ಮೇಲಿನ ಕಾರ್ಯಕ್ರಮಗಳಿಗೆ ಪ್ರತ್ಯೇಕ ಆಹ್ವಾನ ಪತ್ರಿಕೆಯನ್ನು ಕಳಿಸುವ ಸಂಭವ ಇಲ್ಲದಿರುವುದರಿಂದ ಭಕ್ತಾದಿಗಳು ಈ ಪ್ರಕಟಣೆಯನ್ನೇ ಆಹ್ವಾನ ಪತ್ರಿಕೆ ಎಂದು ಪರಿಗಣಿಸಬೇಕಾಗಿ ವಿನಂತಿ.**

**ಮೈಸೂರು ಮಂಜಪತ್ತೂರು ದ್ರಾವಿಡ ಬೃಹಚ್ಚರಣ ಸಂಘ**

### ವಿದ್ಯಾನಿಧಿಗೆ ದೇಣಿಗೆ ನೀಡಿದ ಮಹಾದಾನಿಗಳು

**ಶ್ರೀ ಶ್ರೀಹರಿ ಮಹಾಬಲ ಉಡುಪ ಮತ್ತು ಶ್ರೀಮತಿ ಅನುರಾಧ ಉಡುಪ ರೂ. 25,000/-**

**ಶ್ರೀಮತಿ ಸುಮನ್ ಜಿ. ಕೃಷ್ಣ ರೂ. 2000/-**

# ನಮ್ಮನ್ನಗಲಿದ ನಮ್ಮವರಿಗೆ ಗೌರವಪೂರ್ವಕ ಶ್ರದ್ಧಾಂಜಲಿ

* ಕೆ. ವೆಂಕಟೇಶ್ ಲೇ. ಟಿ. ನಂಜುಂಡಯ್ಯನವರ ಅಳಿಯ 28.06.20.

* ಸುವರ್ಣ 1.7.20 ಹಾಸ್ಟೆಲ್ ಪದ್ಮಾವತಮ್ಮ ಅವರ ಪುತ್ರಿ ಹಾಗೂ ಸಂಘದ ಸದಸ್ಯ ಬಿ.ಎಲ್. ಸತ್ಯನಾರಾಯಣ ಅವರ ಸೋದರಿ.



* ಸದಸ್ಯೆ ವಿಜಯಲಕ್ಷ್ಮಿ (48) 4.7.20 ಶ್ರೀ ಬಾಲಸುಬ್ರಹ್ಮಣ್ಯಂರವರ ಪತ್ನಿ.



* ಜಂಬುನಾಥನ್ 27.7.20 ಸಂಘದ ಸದಸ್ಯ ಶ್ರೀ ಪದ್ಮನಾಭನ್‌ರವರ ಸೋದರ.



* ಸದಸ್ಯ ಶ್ರೀನಿವಾಸ 7.8.20 ಪೋಷಕ ದಿ॥ ಶ್ರೀಕಂಠೇಶ್ವರ ಅಯ್ಯರ್ ಅವರ ಅಳಿಯ.



* ಎಂ.ಆರ್. ಜಯರಾಂ 22.8.20, ಶಿಡ್ಲಘಟ್ಟದ ದಿ॥ ರಾಮಕೃಷ್ಣ ಅವರ ಪುತ್ರ.


* ಶಾರದಮ್ಮ 4.9.20 (89) ಲೇ॥ ಚಂದ್ರಶೇಖರ್ ಅಯ್ಯರ್ ಅವರ ಪತ್ನಿ ಹಾಗೂ ಸದಸ್ಯ ಶ್ರೀ ಬಿ.ಸಿ. ನಟರಾಜ್‌ರವರ ತಾಯಿ.



* ಕ್ಯಾಪ್ಟನ್ ರಾಮನಾಥ್ 4.9.20 ಸಂಘದ ಸದಸ್ಯ ಡಾ. ಆದಿಶೇಷನ್ ಅವರ ಹಿರಿಯ ಸಹೋದರ.



* ಗೀತಾದೇವಿ 12.9.20 (65), ಶ್ರೀ ಅಟ್ಟೂರ್ ರಾಮಕೃಷ್ಣ ಶರ್ಮ ಹಾಗೂ ಶ್ರೀ ರವೀಂದ್ರಶರ್ಮ ಅವರುಗಳ ಸಹೋದರಿ.



* ಜಿ.ಎಸ್. ನಾಗರಾಜು (77) 20.9.20 ಸಂಘದ ಹಿರಿಯ ಸದಸ್ಯ ಶ್ರೀ ಜಿ.ಎಸ್. ಸತ್ಯಮೂರ್ತಿ ಅವರ ಸಹೋದರ ಹಾಗೂ ಹಿಂದಿನ ಕಾರ್ಯಕಾರಿ ಸಮಿತಿ ಸಂಘದ ಸದಸ್ಯ. ಹಾಗೂ ಶ್ರೀ ಹರ್ಷ ನಾಗರಾಜ್‌ರವರ ತಂದೆ.



* ವಿ. ವೆಂಕಟೇಶ್ 19.9.20 ಹಾಸ್ಟೆಲ್ ಪದ್ಮಾವತಮ್ಮನವರ ಅಳಿಯ ಹಾಗೂ ಸಂಘದ ಸದಸ್ಯೆ ಶ್ರೀಮತಿ ಶಾಂತಾರವರ ಪತಿ.

* ರಾಜೇಶ್ವರಿ 24.9.20 ಕೆ.ಎಲ್. ವೇಣುಗೋಪಾಲ್ ಪತ್ನಿ.



* ಎ.ವಿ. ಮಂಜುನಾಥ್ 1.10.20 ಹಿಂದಿನ ಕಾರ್ಯಕಾರಿ ಸಮಿತಿ ಸದಸ್ಯ.



* ಗಾಯತ್ರಿ ರಾಜಾಪುರ್ (82) ಹಿರಿಯ ಸದಸ್ಯೆ ಹಾಗೂ ಹಿರಿಯ ಸದಸ್ಯ ಭಗವಾನ್ ರಾಜಪುರ್ ಅವರ ಸಹೋದರಿ.



* ರಾಜಮ್ಮ 25.10.20 (84) ಮಹಾಪೋಷಕ ಶ್ರೀಕಂಠೇಶ್ವರ ಅವರ ತಾಯಿ.



* ಸಂಘದ ಹಿರಿಯ ಸದಸ್ಯ ಬಿ. ಶೇಷಾಚಲ 29.10.20 (80) ಲೇಖಕಿ ಶ್ರೀಮತಿ ಗಾಯತ್ರಿ ಅವರ ಪತಿ ಹಾಗೂ ಸಂಘದ ಸದಸ್ಯ ಶ್ರೀ ಬಿ.ಎನ್.ಜಿ. ಪ್ರಸಾದ್ ಅವರ ಚಿಕ್ಕಪ್ಪ.



* ಎಲ್. ವೆಂಕಟರಾಮನ್ 31.10.20 (73) ಲಕ್ಷ್ಮೀಪತಯ್ಯನವರ ಪುತ್ರ.

* ಸಂಘದ ಸದಸ್ಯ ಕೆ.ಎಲ್. ಸುಂದರ್ 12.11.20 ಹಿರಿಯ ಸದಸ್ಯ ಎಸ್. ಶಿವರಾಂರವರ ಭಾವ ಮೈದುನ.



* ಆರ್.ಸಿ. ರವಿಶಂಕರ್ 23.11.20 (53) ಲೇ॥ ಛಾಯಾಪತಿ ಪುತ್ರ.



* ಜಕ್ಕೂರು ಶ್ಯಾನುಭೋಗ ಲಕ್ಷ್ಮೀಪತಯ್ಯ (97) 21.12.20 ಸದಸ್ಯ ಸೂರ್ಯಪ್ರಕಾಶ್ ಅವರ ಸೋದರಮಾವ



* ಸಂಘದ ಸದಸ್ಯ ಹೆಚ್.ವಿ. ರವಿಶಂಕರ್ (40) 5.1.21 ಸದಸ್ಯ ಹೆಚ್.ಪಿ. ವೇಣು ಗೋಪಾಲ್ ಅವರ ಪುತ್ರ.

* ಶ್ರೀಮತಿ ರಾಜೇಶ್ವರಿ ಶ್ರೀ ಶ್ರೀನಿವಾಸಮೂರ್ತಿ (ರೈಲ್ವೇಸ್) ಅವರ ಪತ್ನಿ. ಸದಸ್ಯೆ ಶಕುಂತಲ ರಾಮಕೃಷ್ಣರವರ ಅತ್ತಿಗೆ.

* ಮನೋನ್ಮಣಿ 18.10.20 ಸದಸ್ಯ ಶ್ರೀ ಬಾಲಸುಬ್ರಹ್ಮಣ್ಯರವರ ಸೋದರ ಅತ್ತೆ.



* ಹಿರಿಯ ಸದಸ್ಯ ಆರ್.ಜಿ. ಶೇಷಾಚಲಂ (77) ಸದಸ್ಯೆ ಡಾ. ಕೃತಿ ಶೇಷಾಚಲಂರವರ ತಂದೆ ಹಾಗೂ ಡಾ. ಸ್ವಾಮಿನಾಥ ಅವರ ಸೋದರ.

* *

**ಅನ್ನದಾನಕ್ಕೆ ದೇಣಿಗೆ ನೀಡಿದ ದಾನಿಗಳು**

ಶ್ರೀಯುತ ಶ್ರೇಷಾದ್ರಿ ಬಿ.ವಿ. 10,000/–

ಶ್ರೀಮತಿ ರುಕ್ಮಿಣಿ ಎಸ್. ರಾಮ್ 10,001/–

**ಮುಂಬರುವ ಸದಸ್ಯರ ಕೈಪಿಡಿ ಪ್ರಕಟಣೆಗಾಗಿ ದೇಣಿಗೆ ನೀಡಿರುವ ದಾನಿಗಳು**

| | |
|---|---|
| ಶ್ರೀ ಸೋಮಸುಂದರ್ ಎಸ್. | ರೂ. 5051/– |
| ಶ್ರೀ ಮಣಿ ವಿ.ಎಸ್. | ರೂ. 5000/– |
| ಶ್ರೀ ಗೋವಿಂದಪ್ರಸಾದ್ ಬಿ.ಎನ್. | ರೂ. 5000/– |
| ಶ್ರೀ ಸುಬ್ರಹ್ಮಣ್ಯಂ ಬಿ. | ರೂ. 5000/– |
| ಶ್ರೀ ಶರ್ಮ ಕೆ.ಬಿ.ಎಸ್. | ರೂ. 2021/– |
| ಶ್ರೀ ಸುನಿಲ್ ವಿಜಯಕುಮಾರ್ | ರೂ. 250/– |

**ಪಿಯುಸಿಯಲ್ಲಿ ಉತ್ತಮ ಅಂಕಗಳಿಸಿರುವ ನಮ್ಮವರು**

ಶ್ರೀ ವಿಶ್ವನಾಥ್ ಮತ್ತು ಶ್ರೀಮತಿ ರೂಪರವರ ಪುತ್ರಿ **ಹರ್ಷಿತಾ.** (ರಾಜ್ಯಕ್ಕೆ 5ನೇ ಸ್ಥಾನ)

ಶ್ರೀ ಶ್ಯಾಂಸುಂದರ್ ಮತ್ತು ಗೀತಾರವರ ಪುತ್ರಿ **ಬೃಂದಾ.**

ಶ್ರೀ ಮಂಜುನಾಥ್ ಮತ್ತು ಉಮಾರವರ ಪುತ್ರಿ **ಅಪೂರ್ವ.**

ಶ್ರೀ ಸಂಜಯ್ ಮತ್ತು ರೂಪರವರ ಪುತ್ರ **ಶ್ರೇಯಸ್ ಆರ್.ಎಸ್.**

***ಸಂಘವು ಇವರಿಗೆ ಉತ್ತಮ ಭವಿಷ್ಯವನ್ನು ಬಯಸುತ್ತದೆ***

**ಸಂಘಕ್ಕೆ ಹೊಸ ಸದಸ್ಯರು**

**ಶ್ರೀಮತಿ ನಳಿನಿ ಸುಬ್ರಹ್ಮಣ್ಯಂ – ರೂ. 5000/–**

## ಸುದ್ದಿ

ಸಂಘದ ಸದಸ್ಯೆ ಶ್ರೀಮತಿ ಮಂಜುಳಾ ಶ್ರೀನಿವಾಸ್‌ರವರು ಕರ್ನಾಟಕ ಸರ್ಕಾರ, ವಿದ್ಯಾಇಲಾಖೆಯಲ್ಲಿ ಲೆಕ್ಕಾಧೀಕ್ಷಕರಾಗಿ ಪದೋನ್ನತಿ ಪಡೆದಿರುತ್ತಾರೆ. ಸಂಘದ ಶುಭಾಶಯಗಳು.

* *



ಸಂಘದ ಹಿರಿಯರಾದ ಶ್ರೀ ಆರ್.ಎಸ್. ರಮೇಶ್ ರವರು ಎಸ್‌ಬಿಐನ ಅಧಿಕಾರಿಯಾಗಿದ್ದು, ಅಸ್ಸಾಂ ರಾಜ್ಯದಲ್ಲಿ ಕೆಲಸ ನಿರ್ವಹಿಸುತ್ತಿದ್ದು ಅಲ್ಲಿನ ಟೀ ತೋಟಗಳ ಕಾರ್ಮಿಕರ ಅನುಕೂಲಕ್ಕಾಗಿ 26 ಎಸ್‌ಬಿಐ ಎಟಿಎಂಗಳನ್ನು ಸ್ಥಾಪಿಸಿರುತ್ತಾರೆ.

* *


ಸಂಘದ ಸದಸ್ಯ ಅಜಯ್‌ರಾಜಾಪುರ್‌ರವರ ಪುತ್ರಿ **ಕು॥ ಶ್ರದ್ಧಾ** ರವರು `White hat Junior coding'ನಲ್ಲಿ ಪ್ರಥಮ ರ್‍ಯಾಂಕ್ ಗಳಿಸಿರುತ್ತಾರೆ. ಸಂಘದ ಹಾರೈಕೆಗಳು.

* *



ಸಂಘದ ಹಿರಿಯ ಸದಸ್ಯರಾದ ಶ್ರೀ ಮಧುಸೂದನ್‌ರವರ ಮೊಮ್ಮಗಳು, ಸದಸ್ಯ ಶ್ರೀ ಶಶಾಂಕ್‌ರವರ ಮಗಳು **ಕು॥ ಸಾಚಿ** ರವರ ಭರತನಾಟ್ಯ ಕಾರ್ಯಕ್ರಮವು ಅಮೆರಿಕಾದ ಆಸ್ಟಿನ್ ನಗರದಲ್ಲಿ ಕರ್ನಾಟಕ ರಾಜ್ಯೋತ್ಸವ ಸಮಾರಂಭದಲ್ಲಿ ದಿ. 10.12.20 ರಂದು ನೆರವೇರಿತು.

* *




ಪೋಷಕ ಸದಸ್ಯ ರಾಜಾಪುರ ಭಗವಾನ್‌ರವರ ಮೊಮ್ಮಗ, ಸದಸ್ಯ ಸಂಜಯ್‌ರಾಜಾಪುರರವರ ಪುತ್ರ ಚಿ. ಶ್ರೇಯಸ್, ರಾಷ್ಟ್ರೀಯ ರಕ್ಷಣಾ ಅಕಾಡೆಮಿಯವರು ನಡೆಸುವ 2 ಹಂತಗಳ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ.

* *

ಸಂಘದ ಸದಸ್ಯ ಶ್ರೀ ರಾಮಕೃಷ್ಣರವರ ಪುತ್ರಿ **ಕು॥ ವಾಣಿಶ್ರೀ** 'ಹಿಂದೂ ಮಾರ್ಗಳಿ, ಶಾಸ್ತ್ರೀಯಸಂಗೀತ' ಸ್ಪರ್ಧೆಯಲ್ಲಿ ಪಾರಿತೋಷಕ ಪಡೆದಿರುತ್ತಾರೆ.

* *




## 2019–2020ರ ಸಂಘದ ಸರ್ವ ಸದಸ್ಯರ ಸಭೆಯ ಒಂದು ಪಕ್ಷಿನೋಟ

**ಈ** ವರ್ಷ ಕೋವಿಡ್–19ರ ಪರಿಣಾಮ ಇದ್ದರೂ ಕೂಡ 2019–2020ರ ಸರ್ವ ಸದಸ್ಯರ ಸಭೆಯನ್ನು ದಿನಾಂಕ 19.12.2020ರ ಶನಿವಾರದಂದು ಸಂಜೆ 4.00 ಗಂಟೆಗೆ ಬಸವನಗುಡಿಯ ಶ್ರೀ ಮಲ್ಲಿಕಾರ್ಜುನ ಸ್ವಾಮಿ ದೇವಾಲಯದ ಆವರಣದಲ್ಲಿರುವ ಶ್ರೀಭ್ರಮರಾಂಬಿಕ ಮಂಗಳ ಸದನದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಮಾರ್ಗಸೂಚಿಗಳ ಪ್ರಕಾರ ವ್ಯವಸ್ಥಿತವಾಗಿ ಆಯೋಜಿಸಲಾಗಿತ್ತು. ಕೋವಿಡ್–19 ಕಾರಣದಿಂದಾಗಿ ಎಂದಿನಂತೆ ನಡೆಸ ಬೇಕಾಗಿದ್ದ **"ಹಿರಿಯ ಚೇತನರಿಗೆ ಸನ್ಮಾನ"** ಮತ್ತು **"ಪ್ರತಿಭಾ ಪುರಸ್ಕಾರ"** ಕಾರ್ಯಕ್ರಮಗಳನ್ನು ರದ್ದುಗೊಳಿಸಲಾಗಿತ್ತು.

ಸಂಘದ ಉಪಾಧ್ಯಕ್ಷ ಶ್ರೀ ಹೆಚ್.ಕೆ. ಶಶಿಧರ್‌ರವರು ಕಾರ್ಯಕ್ರಮವನ್ನು ನಿರೂಪಿಸಿದರು. ಸಭೆಯು ಸಂಜೆ 4.45ಕ್ಕೆ ಕುಮಾರಿ ಪ್ರಿಯಾ ಮತ್ತು ಚಿ. ಸಮಾಹಿತರವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಸಂಘದ ವತಿಯಿಂದ ಮಕ್ಕಳಿಗೆ ಪ್ರೋತ್ಸಾಹಪೂರ್ವಕವಾಗಿ ನೆನಪಿನ ಕಾಣಿಕೆಗಳನ್ನು ನೀಡಲಾಯಿತು.

ಕಳೆದ ಒಂದು ವರ್ಷದಲ್ಲಿ ನಮ್ಮನ್ನು ಅಗಲಿದ ಸಂಘದ ಸದಸ್ಯರ ಹೆಸರುಗಳನ್ನು ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ನಾಗೇಶ್‌ರವರು ಓದಿದ ನಂತರ ಒಂದು ನಿಮಿಷ ಮೌನ ಆಚರಿಸುವ ಮೂಲಕ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು.

ಇದಾದ ಮೇಲೆ ಸಂಘದ ಅಧ್ಯಕ್ಷ ಶ್ರೀ ಸುಬ್ರಹ್ಮಣ್ಯಂ ರವರ ಸ್ವಾಗತ ಭಾಷಣ ಮತ್ತು ಪ್ರಾಸ್ತಾವಿಕ ನುಡಿಯಲ್ಲಿ ಕೋವಿಡ್–19 ಇದ್ದಾಗ್ಯೂ ಕೂಡ ಸದಸ್ಯರು ಸಾಕಷ್ಟು ಸಂಖ್ಯೆಯಲ್ಲಿ ಭಾಗವಹಿಸಿದ್ದಕ್ಕೆ ಸಂತಸ ವ್ಯಕ್ತಪಡಿಸಿದರು.

ಕಳೆದ ವರ್ಷದ ವಾರ್ಷಿಕ ವರದಿಯನ್ನು ಸಂಘದ ಕಾರ್ಯದರ್ಶಿಗಳಾದ ಶ್ರೀ ಶ್ರೀನಿವಾಸರವರು ಓದಿದರು. ಸಂಘವು ದಿನಾಂಕ ನವೆಂಬರ್ 2019, 10ರಂದು ಕಲ್ಲೂರು, ಸಂಪಿಗೆ, ಹೆಬ್ಬೂರು, ಗೂಳೂರು ಮತ್ತು ಕೈದಾಳ ಸ್ಥಳಗಳಿಗೆ ಒಂದು ದಿನದ ಪ್ರವಾಸವನ್ನು ಏರ್ಪಡಿಸಿತ್ತು. ಈ ಪ್ರವಾಸದಲ್ಲಿ ಸುಮಾರು 120 ಸದಸ್ಯರು ಮತ್ತು ಅವರ ಕುಟುಂಬ ವರ್ಗದವರು ಪಾಲ್ಗೊಂಡಿದ್ದರು. ಡಿಸೆಂಬರ್ 29ರಂದು ಕಿತ್ತಿಗಾನಹಳ್ಳಿಯ ಶ್ರೀನಿವಾಸ ಕಲ್ಯಾಣೋತ್ಸವದಲ್ಲಿ ಸುಮಾರು 40 ಸದಸ್ಯ ದಂಪತಿಗಳು ಭಾಗವಹಿಸಿದ್ದರು. ಫೆಬ್ರವರಿ 28ರಂದು ನಾಗೇಶ್ವರ ಕ್ಷೇತ್ರದಲ್ಲಿ ಸುಮಾರು 500ಕ್ಕೂ ಹೆಚ್ಚು ಸದಸ್ಯರು ಮತ್ತು ಅವರ ಕುಟುಂಬವರ್ಗದವರು ಭಾಗವಹಿಸಿ ಪರಮಾತ್ಮನ ಕೃಪೆಗೆ ಪಾತ್ರರಾದರು. ಅಂದು ಬಾಣಸಿಗರಿಗೆ ವಸ್ತ್ರದಾನ ಮಾಡಲಾಯಿತು. ಈ ಎರಡೂ ಕಾರ್ಯಕ್ರಮಗಳಿಗೂ ಸಹಕರಿಸಿದ ಸದಸ್ಯರನ್ನು ಶ್ರೀನಿವಾಸ ರವರು ವಂದಿಸಿದರು. ಕೋವಿಡ್ ಕಾರಣದಿಂದ ಏಪ್ರಿಲ್‌ನಲ್ಲಿ ಶಂಕರ ಜಯಂತಿ ನಡೆಸಲಾಗಲಿಲ್ಲ ಮತ್ತು ಜುಲೈ–ಸೆಪ್ಟೆಂಬರ್ ಬೃಹಚ್ಚರಣ ಪತ್ರಿಕೆ ಯನ್ನು ಹೊರತರಲಾಗಲಿಲ್ಲ. ವೈಯಕ್ತಿಕ ಕಾರಣಗಳಿಂದ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಟಿ.ಎನ್. ರವಿಕಿರಣ್ ಮುಂದುವರೆಯಲಾರೆ ಎಂದು ತಿಳಿಸಿದ್ದರಿಂದ ಅವರ ಬದಲಿಗೆ ಕೆ.ಎಸ್. ಅನಂತ್‌ರವರನ್ನು ಕಾರ್ಯಕಾರಿ ಸಮಿತಿಗೆ ಸಭೆಯ ಒಪ್ಪಿಗೆ ಪಡೆದು ಸೇರಿಸಿಕೊಳ್ಳಲಾಯಿತು. ಕೆಲವು ತಿಂಗಳಿಂದ ಕಾರ್ಯಕಾರಿ ಸಮಿತಿ ಸದಸ್ಯರ ಸಭೆಯನ್ನು ಕೋವಿಡ್ ಕಾರಣದಿಂದಾಗಿ ಆನ್‌ಲೈನ್‌ನಲ್ಲಿ ನಡೆಸಲಾಯಿತು.

ಖಜಾಂಚಿಗಳಾದ ಶ್ರೀ ಸತ್ಯನಾರಾಯಣ ಅವರು ಲೆಕ್ಕಪತ್ರ ಪರಿಶೋಧಕರಿಂದ ಪರಿಷ್ಕರಿಸಲ್ಪಟ್ಟ ಲೆಕ್ಕಪತ್ರವನ್ನು ಮಂಡಿಸಿದರು. ಹಾಜರಿದ್ದ ಸದಸ್ಯರು ಕೈ ಎತ್ತುವ ಮೂಲಕ ಸರ್ವಾನುಮತದಿಂದ ಅನುಮೋದಿಸಿದರು.

ಅಧ್ಯಕ್ಷರು ನಂತರ ಬೃಹಚ್ಚರಣ ಸಂಘದ ಸದಸ್ಯರ ಮುದ್ರಿಸಿದ ಕೈಪಿಡಿಯನ್ನು (Member's directory) ಹೊರತರುವ ಕೆಲಸವನ್ನು ಪ್ರಾರಂಭಿಸಲಾಗಿದೆ. ಇದರಲ್ಲಿ ಸದಸ್ಯರ ಹೆಸರು, ವಿಳಾಸ, ಸ್ಥಿರ ದೂರವಾಣಿ, ಚರ ದೂರವಾಣಿ ಮತ್ತು ಇ–ಮೈಲ್ ವಿಳಾಸಗಳು ಇರುತ್ತವೆ ಎಂದು ತಿಳಿಸಿದರು. ಬೃಹಚ್ಚರಣ ಸಂಘದ ಜಾಲತಾಣ (website) ಕೂಡ ತಯಾರಾಗುತ್ತಿದೆ ಎಂದು ತಿಳಿಸಿದರು. ಇದಕ್ಕಾಗಿ ಒಂದು ಉಪಸಮಿತಿ ರಚಿಸಿದ್ದು ಅದರಲ್ಲಿ ಅಧ್ಯಕ್ಷರು, ಉಪಾಧ್ಯಕ್ಷ ಶ್ರೀ ಶಶೀಧರ್, ಕಾರ್ಯದರ್ಶಿ ಶ್ರೀನಿವಾಸ, ಸಹ ಕಾರ್ಯದರ್ಶಿ ಅರುಣ್, ಶ್ರೀಯುತರಾದ ಗಣೇಶ್ ಶ್ರೀಧರ್, ನಾಗೇಶ್, ನಿತಿನ್ ಭಾಸ್ಕರ್, ಶಿವಕುಮಾರ್

ನಟರಾಜ್ ಮತ್ತು ರಮೇಶ್. ಈ ಕಾರ್ಯಗಳು ಇನ್ನೆರಡು ತಿಂಗಳುಗಳಲ್ಲಿ ಪೂರ್ಣವಾಗುತ್ತದೆ ಎಂದರು. ಮುಂದಿನ ದಿನಗಳಲ್ಲಿ ಕಾಗದದ ಬಳಕೆಯನ್ನು ಕಡಿಮೆ ಮಾಡುವ ಉದ್ಧೇಶದಿಂದ ಇನ್ನು ಮುಂದೆ ವಾಟ್ಸಪ್ ಮತ್ತು ಇ–ಮೈಲ್ ಮೂಲಕ ಕಾರ್ಯಕ್ರಮಗಳ ವಿವರಗಳನ್ನು ತಲುಪಿಸುವ ಯೋಜನೆ ಇದೆ ಎಂದು ತಿಳಿಸಿದರು. ಇದರ ಸೌಲಭ್ಯವಿಲ್ಲದವರಿಗೆ ಅಂಚೆಯ ಮೂಲಕ ವಿವರಗಳನ್ನು ತಲುಪಿಸಲಾಗುತ್ತದೆ ಎಂದರು.



## ಸಂಘದ ಸದಸ್ಯರ ಸಲಹೆಗಳು

ಶ್ರೀಮತಿ ಅಂಜನಿ ನಂದಕಿಶೋರ್‌ರವರು ಸಂಘದ ಕಾರ್ಯಚಟುವಟಿಗಳಿಗೆ ಬೆಂಬಲ ಸೂಚಿಸುತ್ತಾ, ನಮ್ಮ ಸಮುದಾಯದ ಮಕ್ಕಳ ಪ್ರತಿಭೆಗಳು ಬೆಳಕಿಗೆ ಬರಲು ನೆರವಾಗುವಂತಹ ಕಾರ್ಯಕ್ರಮಗಳನ್ನು ನಡೆಸಬೇಕು ಎಂದರು. ಸದಸ್ಯ ಶ್ರೀ ರಾಮಚಂದ್ರರವರು ಸಂಘವು ಚೆನ್ನಾಗಿ ಕಾರ್ಯಕ್ರಮ ನಡೆಸಿಕೊಂಡು ಬರುತ್ತಿದೆ ಎಂದು ಸಂತೋಷ ವ್ಯಕ್ತಪಡಿಸಿದರು. ಕೋವಿಡ್–19 ಇದ್ದರೂ ಸರ್ಕಾರದ ನಿಯಮಗಳಂತೆ ಕಾರ್ಯಕ್ರಮಗಳನ್ನು ನಡೆಸಬೇಕೆಂದು ಕೋರಿದರು. ಶ್ರೀ ಬಿ.ಸಿ. ನಟರಾಜ್‌ರವರು ಪದಾಧಿಕಾರಿಗಳಿಗೆ ವಂದಿಸಿತ್ತಾ ಇಂತಹ ಸಂದರ್ಭದಲ್ಲೂ ಕಾರ್ಯಕ್ರಮ ಚೆನ್ನಾಗಿ ನಡೆಸಲಾಗುತ್ತಿದೆ ಎಂದರು. ಹೊಸ ಸದಸ್ಯರ ಪರಿಚಯವನ್ನು ಮಾಡಬೇಕೆಂದು ಸೂಚಿಸಿದರು. ಸಂಘದ ಹೆಸರು ಏಕೆ ಬದಲಾಗಬೇಕು ಎಂದು ಕೇಳಿದರು. ತಿದ್ದುಪಡಿ ಆಗುವುದಾದರೆ ಎಮ್.ಎಮ್.ಡಿ.ಬಿ.ಸ್. ಬೃಹಚ್ಚರಣ ಸಂಘ ಎಂದು ಬದಲಾಯಿಸಬಹುದು ಎಂದು ಸೂಚಿಸಿದರು.

ಸದಸ್ಯರ ಅನಿಸಿಕೆಗಳಿಗೆ, ಸಲಹೆಗಳಿಗೆ ಪ್ರತಿಕ್ರಿಯಿಸಿದ ಅಧ್ಯಕ್ಷರು ಅದಕ್ಕೆ ವಂದನೆಗಳು ಎಂದರು. ಶ್ರೀಮತಿ ಅಂಜನಿಯವರು ಹೇಳಿದ ಯುವಕರ ಪ್ರತಿಭೆಗಳು ಹೊರ ಬರುವಂತಹಾ ಕಾರ್ಯಕ್ರಮಗಳನ್ನು ಚರ್ಚಿಸುತ್ತೇವೆ ಎಂದು ತಿಳಿಸಿದರು. ಶ್ರೀ ರಾಮಚಂದ್ರರವರು ಮುಂದೆ ಸಂಘದ ಚಟುವಟಿಕೆ ನಡೆಸಿಕೊಂಡು ಹೋಗುವಂತೆ ತಿಳಿಸಿದ್ದು, ಸಂಘವು ಅವರ ಸಲಹೆಯನ್ನು ಒಪ್ಪಿರುತ್ತಾರೆ. ಎಂದರು.

ಶ್ರೀ ನಟರಾಜ್‌ರವರು ಸಂಘದ ಹೆಸರಿನ ಬದಲಾವಣೆಯ ಬಗ್ಗೆ ಉತ್ತರಿಸಿತ್ತಾ ಇದು ಉಪನಿಯಮಗಳ ಕೆಲವು ಅನುಚ್ಛೇದಗಳನ್ನು ಮಾತ್ರ ಬದಲಾಯಿಸುವಷ್ಟು ಸರಳ ಅಲ್ಲ. ಸಂಘದ ಹೆಸರನ್ನು ಬದಲಾಯಿಸಲು ತುಂಬಾ ಪ್ರಕ್ರಿಯೆಗಳಿವೆ ಎಂದರು. ಎರಡು ವಿಶೇಷ ಸರ್ವಸದಸ್ಯರ ಸಭೆಗಳನ್ನು ನಡೆಸಬೇಕು. ಪ್ರತಿ ಸಭೆಗೂ 21 ದಿನಗಳ ಸೂಚನೆಯನ್ನು ಕೊಡಬೇಕು ಮತ್ತು ಇನ್ನೂ ಹಲವಾರು ವಿಚಾರಗಳನ್ನು ವಿವರಿಸಿದರು. ಇದಕ್ಕೆ ಯಾವುದೇ ಕ್ಷಿಪ್ರ ವಿಧಾನಗಳಿಲ್ಲ ಎಂದು ತಿಳಿಸಿದರು. ಹೆಸರು ಬದಲಾಯಿಸಬೇಕಾ ಎಂದು ಸಭೆಯಲ್ಲಿ ಅಥವಾ ವೈಯುಕ್ತಿಕವಾಗಿ ಹೇಳಬಹುದು. ಸಂಘದ ಹೆಸರಿನಲ್ಲಿ "ಬ್ರಾಹ್ಮಣ" ಎಂಬ ಪದ ಇಲ್ಲದಿದ್ದರೂ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಅಂಗಸಂಸ್ಥೆ ಎಂದು ಗುರುತಿಸಲಾಗಿದೆ.

ಜಾಲತಾಣದಲ್ಲಿ ಸಂಘದ ಸದಸ್ಯರ ಮಾಹಿತಿ ಪಡೆದುಕೊಳ್ಳಲು ಕಷ್ಟವೆನಿಬಹುದಾದ ಸದಸ್ಯರಿಗಾಗಿ ಮುದ್ರಿಸಿದ ಕೈಪಿಡಿಯ ಅವಶ್ಯಕತೆ ಇದೆ. ಸದಸ್ಯರು ತಮ್ಮ ಮಾಹಿತಿಗಳನ್ನು ಸರಿಯಾಗಿದೆಯೇ ಎಂದು ಖಾತ್ರಿಪಡಿಸಬೇಕು. ತಪ್ಪಿಲ್ಲದ ಮುದ್ರಿಸಿದ ಕೈಪಿಡಿ ಹೊರಬರಬೇಕೆಂದು ನಮ್ಮ ಅಭಿಲಾಷೆ. ಇದಕ್ಕೆ ಎಲ್ಲಾ ಸದಸ್ಯರ ಸಹಕಾರ ಕೋರಿದರು.

ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಶಂಕರಪ್ರಸಾದ್‌ರವರು ಸಭೆ ಯಶಸ್ವಿಯಾಗಲು ಸಹಕರಿಸಿದ ಸದಸ್ಯರಿಗೆ, ಸಂಘದ ಪರಿಶೋಧಿತ ಲೆಕ್ಕ ಪತ್ರವನ್ನು ತಯಾರಿ ಮಾಡಿ ಕೊಡುತ್ತಿರುವ ಶ್ರೀಯುತರಾದ ಬಿ.ಎನ್.ಜಿ. ಪ್ರಸಾದ್ ಮತ್ತು ಬಿ.ಎನ್.ಜಿ. ಕುಮಾರ್‌ರವರಿಗೆ ಸಂಘದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಿದರು. ಸಂಘದ ಹಿರಿಯ ಸದಸ್ಯ ಶ್ರೀ ಬಿ.ವಿ. ಶೇಷಾದ್ರಿಯವರು ಲಘು ಉಪಹಾರವನ್ನು ರೂ. 10,000/– ನೀಡುವುದರೊಂದಿಗೆ ಪ್ರಾಯೋಜಿಸಿದ್ದರು. ಶ್ರೀಯುತರಿಗೆ ಸಂಘದ ಪರವಾಗಿ ಧನ್ಯವಾದಗಳು. ಸರ್ವ ಸದಸ್ಯರ ನಡಾವಳಿಗಳನ್ನು ದಾಖಲಿಸುವುದರಲ್ಲಿ ಸೇವೆ ಸಲ್ಲಿಸುತ್ತಿರುವ ಶ್ರೀಮತಿ ಲಲಿತಾ ಮತ್ತು ಶ್ರೀ ಆರ್. ರಮೇಶ್ ಹಾಗೂ ಛಾಯಚಿತ್ರಗಳನ್ನು ಒದಗಿಸಿದ ಶ್ರೀ ಕೆ.ಸಿ. ನಟರಾಜ್ ಅವರಿಗೆ ವಂದನೆಗಳು.

ಕಾರ್ಯಕ್ರಮಕ್ಕೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಸಂಘದ ಪರವಾಗಿ ವಂದನೆಗಳನ್ನು ಅರ್ಪಿಸಲಾಯಿತು.



◆ ಲಲಿತಾ ರಮೇಶ್
9945199637



ಶಿವಗಣ ನಂದಿ

ಚಿತ್ರ : ಪಲ್ಲವಿ ಗುರುಪ್ರಸನ್ನ
9880091624

ಅಡುಗೆ

## ಗುಬ್ಬಚ್ಚಿ ಬಾಳೆ ಎಲೆಯ ಬಜ್ಜಿ

**ಲಾ**ಕ್‌ಡೌನ್ ಸಮಯದಲ್ಲಿ, ನನ್ನ ಬಾಲ್ಯದಲ್ಲಿ ನಾನು ತಿಂದ ಕೆಲವು ತಿನಿಸುಗಳನ್ನು ನೆನಪು ಮಾಡಿಕೊಂಡು ಅವುಗಳನ್ನು ತಮಗೆ ತಿಳಿಸುತ್ತಿದ್ದೇನೆ.

**ಬೇಕಾಗುವ ಪದಾರ್ಥ :** * ಗುಬ್ಬಚ್ಚಿ ಬಾಳೆ ಎಲೆ, * ಅಚ್ಚಖಾರದ ಪುಡಿ, * ಕಡಲೆ ಹಿಟ್ಟು, * ಉಪ್ಪಿನ ಪುಡಿ, * ಇಂಗು, * ಒಂದೆರಡು ಚಮಚೆ ಅಕ್ಕಿಹಿಟ್ಟು.

**ಮಾಡುವ ವಿಧಾನ**

ಮೊದಲಿಗೆ ಗುಬ್ಬಚ್ಚಿ ಬಾಳೆಎಲೆ ತೊಳೆದಿಟ್ಟುಕೊಳ್ಳಬೇಕು. ನಂತರ 1 ಬಟ್ಟಲು ಕಡಲೆಹಿಟ್ಟಿಗೆ ಎರಡು ಮೂರು ಚಮಚೆ ಅಕ್ಕಿ ಹಿಟ್ಟು ಹಾಕಬೇಕು. ಅದಕ್ಕೆ ಅನುಗುಣವಾಗಿ ಅಚ್ಚಖಾರದ ಪುಡಿ, ಇಂಗು, ಉಪ್ಪಿನ ಪುಡಿ ಹಾಕಿ ಗಟ್ಟಿಯಾಗಿ ಕಲಸಬೇಕು. ಒಂದು ಬಾಣಲೆಯಲ್ಲಿ ಅಡಿಗೆ ಎಣ್ಣೆಯನ್ನು ಹಾಕಿ ಮಂದ ಉರಿಯಲ್ಲಿ ಕಾಯಲು ಬಿಡಿ. ಒಂದು ಸಣ್ಣ ಕಲಸಿದ ಹಿಟ್ಟಿನ ಉಂಡೆಯನ್ನು ಹಾಕಿ, ಎಣ್ಣೆ ಕಾದಿದೆಯೆ ಎಂದು ನೋಡಿ. ಎಣ್ಣೆ ಕಾದ ನಂತರ, ಎಲೆಯನ್ನು ಹಿಟ್ಟಿನಲ್ಲಿ ಮುಳುಗಿಸಿ ಕರಿಯಿರಿ.


ಬಿಸಿಯಾದ ಬಾಳೆ ಎಲೆಯ ಬಜ್ಜಿ ತಯಾರಾದ ನಂತರ ಅದನ್ನು ಸಾಸ್ ಅಥವಾ ಚಟ್ನಿಯೊಂದಿಗೆ ಸವಿಯಿರಿ.



ಗುಬ್ಬಚ್ಚಿ
ಬಾಳೆಎಲೆ ಗಿಡ

◆ ಶ್ರೀಮತಿ ಕೆ.ಎಲ್. ಶಾಂತ
9620021599

## ಗುರುವಾಯೂರಪ್ಪ ಶ್ರೀಕೃಷ್ಣ ಹರೇ



ಕೃಷ್ಣೋರಕ್ಷತಿ ಜಗತ್ರಯ ಗುರುಃ
ಕೃಷ್ಣಂ ನಮಸ್ಯಾಮಹಂ ।
ಕೃಷ್ಣೋನಾಮಂ ಶತ್ರುವೋ ವಿನಿಹತಾ
ಕೃಷ್ಣಾಯತಸ್ಮೈ ನಮಃ ।
ಕೃಷ್ಣಾದೇವ ಸಮಸ್ಥಿತಂ ಜಗದಿದಂ
ಗೋಪಾಲ ಕೃಷ್ಣಸ್ಯದಾಸೋಸ್ಯಹಂ ।
ಕೃಷ್ಣೋ ತಿಷ್ಟತಿ ಸರ್ವ ಮೇದಖಿಲಂ
ಗುರುವಾಯೂರು ಗೋಪಾಲ ಕೃಷ್ಣ ರಕ್ಷಸ್ವಮಾಂ

**ರಾಗ :** ಶಂಕರಾಭರಣ

**ಪಲ್ಲವಿ :** ಗುರುವಾಯೂರಪ್ಪ ಕೃಷ್ಣಹರೇ ಗೋಪಾಲ ॥ ಗುರು

**ಅನುಪಲ್ಲವಿ**

ಚೆನ್ನ ಬಾಲಕೃಷ್ಣ ಆನಂದಮೂರ್ತಿಯೇ
ನಿನ್ನ ಮೂರ್ತಿಯನೋಡಿ ಮೈಮರೆತು ನಿಂತೆ ॥ ಗುರು

**ಚರಣ**

ದೀನ ರಕ್ಷಕನೆಂದು ದಾರಿ ತೋರುತ ಬಂದು
ದೀನರ ಸಲಹುವ ಕರುಣಾಳು ನೀನೆಂದು।
ನಿಜ ಭಕ್ತರ ಸಿರಿ ಭಾಗ್ಯ ಸುರಭನು
ನಿನ್ನ ಪಡೆದಂಥ ನಾನೆಷ್ಟು ಧನ್ಯನೋ ॥ ಗುರು

ಭಕ್ತವತ್ಸಲನೇ ಭಕ್ತರ ಪ್ರಿಯನೇ
ಕುಪಿತನಾಗದೆ ಎನ್ನ ಸಲಹಯ್ಯ ತಂದೆ ।
ನಿನ್ನ ನಾಮದ ಒಲವು ಎನ್ನ ಬಾಳಿನ ದೀಪ
ಸದಾ ನಿನ್ನ ನೆನೆಯುವಂತೆ ಕೃಪೆಮಾಡೋ ಹರಿಯೇ ॥ ಗುರು

**ನಾಮಾವಳಿ**

ಗುರುವಾಯೂರಪ್ಪ ಗೋಪಾಲಕೃಷ್ಣ
ಕೃಷ್ಣಂ ವಂದೇ ಮಾಂ ಪಾಹಿ



◆ ಡಾ. ಅಮೃತಕುಮಾರ್
9845731758

ರೇಖಾಚಿತ್ರ



◆ ಲಲಿತಾ ರಮೇಶ್

# ಸರ್ವಸದಸ್ಯರ ಸಭೆಯ ಚಿತ್ರಗಳು

ಚಿತ್ರಗಳು :
ಎನ್. ಶಿವಕುಮಾರ್



ಸ್ವಾಗತ ಕೋರುತ್ತಿರುವ ಸಮಿತಿ ಸದಸ್ಯರು





ಸ್ವಾಗತ ಕೋರುತ್ತಿರುವ ಉಪಾಧ್ಯಕ್ಷ ಶ್ರೀ ಹೆಚ್.ಕೆ. ಶಶಿಧರ್ ಮತ್ತು ಸದ್ಯಸರು







ಕಾರ್ಯಕಾರಿ ಸಮಿತಿ ಸದ್ಯಸ – ಶ್ರೀ ಟಿ.ಎಸ್. ನಾಗೇಶ್, “ಸಮ್ಮನ್ನಗಲಿದ ನಮ್ಮವರಿಗೆ” ಮೌನ ಶ್ರದ್ಧಾಂಜಲಿ



ಪ್ರಾರ್ಥನೆ ಚಿ॥ ಸಮಾಹಿತ, ಕು॥ ಪ್ರಿಯ



ಕಾರ್ಯದರ್ಶಿ ಶ್ರೀ ಎಸ್.ಸಿ. ಶ್ರೀನಿವಾಸ್‌ರವರಿಂದ ವರದಿ ಮಂಡನೆ

# ಸರ್ವಸದಸ್ಯರ ಸಭೆಯ ಚಿತ್ರಗಳು

ಚಿತ್ರಗಳು :
ಎನ್. ಶಿವಕುಮಾರ್




ಖಜಾಂಜಿ ಶ್ರೀ ಸತ್ಯನಾರಾಯಣರವರಿಂದ ಆಯ-ವ್ಯಯ ಮಂಡನೆ -- ಸದಸ್ಯರ ಅನುಮೋದನೆ



ಅಧ್ಯಕ್ಷ ಶ್ರೀ ಸುಬ್ರಹ್ಮಣ್ಯಂರವರಿಂದ ಅಧ್ಯಕ್ಷೀಯ ಭಾಷಣ



ಪೋಷಕ ಸದಸ್ಯರು



ಶ್ರೀ ಶಂಕರ್‌ಪ್ರಸಾದ್‌ರವರಿಂದ ವಂದನಾರ್ಪಣೆ








# 10 ವರ್ಷಗಳ ಹಿಂದಿನ ನೆನಪು......













## ಕಿತ್ತಿಗಾನಹಳ್ಳಿಯ ಅಶ್ವತ್ಥ ಕಟ್ಟೆ ಜೀರ್ಣೋದ್ಧಾರ

ಕಿತ್ತಿಗಾನಹಳ್ಳಿಯ ಶ್ರೀ ಶ್ರೀನಿವಾಸ ದೇವಾಲಯದ ಆವರಣದಲ್ಲಿರುವ ನಾಗಸುಬ್ರಹ್ಮಣ್ಯ ಹಾಗೂ ಅಶ್ವತ್ಥ ಕಟ್ಟೆ ಜೀರ್ಣೋದ್ಧಾರ ಪ್ರತಿಷ್ಠಾಪನ ಕಾರ್ಯವನ್ನು ಶಾಸ್ತ್ರೋಕ್ತವಾಗಿ ಜನವರಿ 2011ರ ಮಾಹೆಯ 28, 29 ಮತ್ತು 30ರಂದು ಶ್ರೀ ನಂಜುಂಡ ದೀಕ್ಷಿತರ್ ಮತ್ತು ಮೈಸೂರು ಮಂಪತ್ತೂರು ದ್ರಾವಿಡ ಬೃಹಚ್ಚರಣ ಸಂಘದ ವತಿಯಿಂದ ನಡೆಸಲಾಯಿತು. ಈ ಕಾರ್ಯಕ್ರಮ ಆಗ ತಾನೇ ಆಯ್ಕೆಯಾಗಿದ್ದ ಹೊಸ ಕಾರ್ಯಕಾರಿ ಸಮಿತಿಗೆ ಒಂದು ಸವಾಲು ಮತ್ತು ಹೆಮ್ಮೆಯ ವಿಷಯವಾಗಿತ್ತು. ಏಕೆಂದರೆ ಆಗ ಕೆಲವು ಕಾರ್ಯಕಾರಿ ಸಮಿತಿ ಸದಸ್ಯರಿಗೆ ಈ ಕಾರ್ಯ ಸುಗಮವಾಗಿ ನಡಯಬಹುದೆ ಎಂಬ ಆತಂಕ ಮತ್ತು ಇಷ್ಟು ಕ್ಷಿಪ್ರಗತಿಯಲ್ಲಿ ಆಗಬಹುದೆಂದು ಊಹಿಸಿರಲಿಲ್ಲ. ಆದರೆ ಇದು ಸಾಧ್ಯವಾದದ್ದು ನಮ್ಮ ಕಾರ್ಯಕಾರಿ ಸಮಿತಿ ಸದಸ್ಯರ ಮತ್ತು ನಮ್ಮ ಸಮುದಾಯದ ಸದಸ್ಯರ ದೈವಕಾರ್ಯುಕ್ಕೆ ತಮ್ಮ ಉದಾರವಾದ ಕೊಡುಗೆಯಿಂದ. ಈ ಮೊದಲನೆಯ ಕಾರ್ಯಕ್ರಮವು ಕಾರ್ಯಕಾರಿ ಸಮಿತಿಯ ಸದಸ್ಯರಿಗೆ ಇನ್ನೂ ಹಲವಾರು ಕಾರ್ಯಗಳನ್ನು ಕೈಗೊಳ್ಳಲು ಉತ್ತೇಜನ ನೀಡಿತು. ಇದಾದ ನಂತರ ಈ ಸ್ಥಳದಲ್ಲೇ ಬರುವ ಭಕ್ತಾದಿಗಳ ಸುರಕ್ಷತೆ ಹಾಗೂ ಸೌಲಭ್ಯಕೊಸ್ಕರ ನಾಗರಕಟ್ಟೆ ಮೆಟ್ಟಲು ಹತ್ತಲು ಮತ್ತು ಇಳಿಯಲು ಆಧಾರಕಂಬಿಯನ್ನು ನಿರ್ಮಿಸಲು ಕೂಡ ನಮ್ಮ ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಸಮುದಾಯದ ಸದಸ್ಯರು ಕೊಡುಗೆ ನೀಡಿ ಪ್ರೋತ್ಸಾಹಿಸಿದರು. ಈಗಿನ ಕಾರ್ಯಕಾರಿ ಸಮಿತಿಯು ಇದೇ ರೀತಿ ಮತ್ತು ಇನ್ನೂ ಹಲವಾರು ಕಾರ್ಯಯೋಜನೆಗಳನ್ನು ಹಮ್ಮಿಕೊಂಡು ಅದರಲ್ಲಿ ಯಶಸ್ಸು ಗಳಿಸಲೆಂದು ನನ್ನ ಪ್ರಾಮಾಣಿಕ ಹಾರೈಕೆ.



**ಎಸ್. ಸೋಮಸುಂದರ**

## ಸುದ್ದಿ ಚಿತ್ರ




ಸಂಘದ ಹಿರಿಯ ಸದಸ್ಯ ಶ್ರೀ ಬಿ.ಎನ್.ಜಿ. ಪ್ರಸಾದ್ ರವರ ಧನುರ್ಮಾಸದ ಪ್ರಯುಕ್ತ ನಗರದ ಲಾಲ್‌ದಾಸ್ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ಏರ್ಪಡಿಸಿದ್ದ ಸಂಗೀತ ಕಾರ್ಯಕ್ರಮ ನೀಡುತ್ತಿರುವುದು



ಚಿತ್ರ – ರಮ್ಯ ಪರಮೇಶ್





ನಮ್ಮ ಸಂಘದ ಸದಸ್ಯರಾದ ಶ್ರೀ ಎಸ್.ಆರ್. ಶ್ರೀಪದ್ಮನಾಭನ್ ಅವರ ಪುತ್ರಿ ಕು॥ ರಂಜಿತಾ ಅವರು ತಿರುಪತಿ ತಿರುಮಲೆ ದೇವಸ್ಥಾನದಲ್ಲಿ ನಾಟ್ಯಪ್ರದರ್ಶನವನ್ನು ನೀಡಿರುತ್ತಾರೆ.




ಚಿತ್ರ – ಕೆ.ಎಲ್. ಶಾಂತ



ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಸಹಕಾರ್ಯದರ್ಶಿ ಶ್ರೀ ಅರುಣ್‌ರವರು ದೇವಗಿರಿ ದೇವಸ್ಥಾನದ ಧನುರ್ಮಾಸ ಪ್ರಯುಕ್ತ ಭಗವತ್ ಕೈಂಕರ್ಯದಲ್ಲಿ ಪಾಲ್ಗೊಂಡಿರುವುದು.

### ಅಭಿನಂದನೆಗಳು

ಶಿವಮೊಗ್ಗದ ಮಾನಸ ಟ್ರಸ್ಟ್ ಡಾ. ಅಶೋಕ್ ಪೈ ಸ್ಮರಣಾರ್ಥ ನೀಡುವ ಪ್ರಸಕ್ತ ಸಾಲಿನ “ಮಾನಸ ರಾಷ್ಟ್ರೀಯ ಪುರಸ್ಕಾರ”ಕ್ಕೆ ಖ್ಯಾತ ಮನೋವೈದ್ಯ ಹಾಗೂ ಸಮಾಜ ಸೇವೆಯಲ್ಲಿ ನಿರತರಾಗಿರುವ ನಮ್ಮ ಸಂಘದ ಹಿರಿಯ ಸದಸ್ಯ ಡಾ. ಜಿ. ಸ್ವಾಮಿನಾಥ್ ರವರು ಆಯ್ಕೆ ಆಗಿದ್ದಾರೆ. ಈ ವಿಚಾರವನ್ನು ಮಾನಸ ಟ್ರಸ್ಟ್‌ನ ನಿರ್ದೇಶಕಿ ಡಾ. ರಜನಿ ಪೈ ತಿಳಿಸಿದ್ದಾರೆ. ಪ್ರಶಸ್ತಿಯು ನಗದು ರೂ. 75,000 ಮತ್ತು ಸ್ಮರಣಿಕೆಯನ್ನು ಒಳಗೊಂಡಿರುತ್ತದೆ.



ಡಾ.ಸ್ವಾಮಿನಾಥ

# ಮಂಕುತಿಮ್ಮನ ಕಗ್ಗ

**ಬದುಕು ಜಟಕಾಬಂಡಿ, ವಿಧಿಯದರ ಸಾಹೇಬ ।**
**ಕುದುರೆನೀನ್, ಅವನು ಪೇಳ್ದಂತೆ ಪಯಣಿಗರು ॥**
**ಮದುವೆಗೋ ಮಸಣಕೋ ಹೋಗೆಂದ ಕಡೆಗೋಡು ।**
**ಪದಕುಸಿಯೆನೆಲವಿಹುದು – ಮಂಕುತಿಮ್ಮ ॥**

ಇಲ್ಲಿ ತಿಮ್ಮಗುರು ನಮ್ಮ ಬದುಕನ್ನು ಒಂದು ಜಟಕಾಬಂಡಿಗೆ ಹೋಲಿಸಿದ್ದಾರೆ. ನಮ್ಮ ಬದುಕೆಂಬುದೇ ಒಂದು ಜಟಕಾಬಂಡಿ. ಜಟಕಾಬಂಡಿ ಎಂದ ಮೇಲೆ ಅದನ್ನು ಓಡಿಸುವವನೊಬ್ಬ ಸಾಹೇಬನಿರಬೇಕಲ್ಲವೇ? ಹಾಗೆಯೇ ಒಂದು ಕುದುರೆಯೂ ಇರಬೇಕು. ನಮ್ಮ ಬದುಕೆಂದರೆ ನಮ್ಮ ಜಗತ್ತು ಎಂಬ ಜಟಕಾಬಂಡಿಯನ್ನು ಓಡಿಸುವವನು ವಿಧಿ, ಅಥವಾ ದೈವ. ಆದ್ದರಿಂದಲೇ ಈ ಲೋಕದ ವ್ಯವಸ್ಥೆ ಅವನಿಗೆ ಸೇರಿದ್ದು ಎಂದು ಹೇಳುವುದು, ಅವನೇ ಶಾಶ್ವತ ಧರ್ಮಗೋಪ್ತಾ. ಈ ಜಗತ್ತು ಬ್ರಹ್ಮವಸ್ತುವಿನ ಲೀಲೆಗಾಗಿಯಲ್ಲವೇ ತೋರಿಬಂದಿದೆ. ಆದ್ದರಿಂದ ಅದು ಹೇಗೆ ನಡೆಯಬೇಕೆಂದು ಹೇಳುವವನು ಅವನೇ ಜಟಕಾಬಂಡಿಯ ಮುಂದೆ ಹೋಗಲು ಸಾಧನ ವಾಗಿರುವುದು ಕುದುರೆಯಲ್ಲವೇ ಹೇಗೆ ಸಾಹೇಬನು ಹೇಳಿದ ಕಡೆ ಕುದುರೆ ಹೋಗಬೇಕಾದಂತೆ ಈ ಜಗತ್ತಿನ ನಿಯಾಮಕನು ಹೇಳಿದ ಕಡೆ ಕುದುರೆ ಹೋಗಬೇಕು. ಅದು ಒಳ್ಳೆಯ ಕಾರಣಕ್ಕಾಗಿರಬಹುದು, ಅಮಂಗಳಕರವಾದ ಉದ್ದೇಶಕ್ಕಾಗಿರಬಹುದು, ಕೆಟ್ಟದ್ದಾಕ್ಕಾಗಿರಬಹುದು. ಹೇಗೋ ಯಜಮಾನ ಹೇಳಿದ ಕಡೆ ಹೋಗಬೇಕು. ಇದು ಒಬ್ಬೊಬ್ಬ ವ್ಯಕ್ತಿ ಮನುಷ್ಯನ ಸ್ಥಿತಿಯಾದರೆ ಜಗತ್ತಿನ ಇತರ ಜನ, ಪ್ರಯಾಣಿಕರು, ಆದರೂ ವಿಧಿ ಸಾಹೇಬನು ಕರೆದು ಕೊಂಡು ಹೋದಕಡೆಗೆ ಹೋಗಬೇಕು. ಅವನ ಆಜ್ಞೆಯಿಂದ ಯಾರು ತಪ್ಪಿಸಿಕೊಳ್ಳುವ ಹಾಗಿಲ್ಲ. ಗಾಡಿಗೆ ಕಟ್ಟಿದ ಕುದುರೆ ತನ್ನ ಶಕ್ತಿಯಿದ್ದಷ್ಟು ಹೋಗುತ್ತದೆ. ಮುಂದೆ ಹೋಗಲು ಸಾಧ್ಯವಾಗದೆ ಹೋದಾಗ ಕೆಳಗೆ ಕುಸಿಯುತ್ತದೆ, ಸತ್ತೇನೂ ಹೋಗುವುದಿಲ್ಲ. ಕುಸಿದು ಬಿದ್ದಾಗ ನೆಲವೇ ಆಧಾರ. ಅಲ್ಲಿ ಚೇತರಿಸಿಕೊಂಡು ಮುಂದೆ ಹೋಗಬಹುದು ಹೀಗೆ ನಮ್ಮ ಜೀವನ, ವಿಧಿ ಸಾಹೇಬ ಹೇಳಿದಂತೆ ನಡೆಯುತ್ತದೆ ಎಂಬುದನ್ನು ಅರಿತುಕೊಂಡು ಅವನ ಲೀಲೆಯಲ್ಲಿ ಪಾಲು ಗೊಂಡಾಗ ನಮ್ಮ ಸಮಸ್ಯೆಗಳು ತಾವಾಗಿಯೇ ಪರಿಹಾರ ವಾಗುತ್ತವೆ.

◆ **ಎಸ್. ಶ್ರೀನಿವಾಸಯ್ಯ**
7899318098



## ಸಂಘಕ್ಕೆ ವಾರ್ಷಿಕ ನಿರ್ವಹಣಾ ವೆಚ್ಚ ರೂ. 500/– ನೀಡಿರುವ ಸದಸ್ಯರು

ಶ್ರೀಯುತರು

| | |
|---|---|
| ನಟರಾಜ ಬಿ.ಸಿ. | ಶರ್ಮ ಕೆ.ಬಿ.ಎಸ್. |
| ಗೌರಿ ಬಿ. ನಟರಾಜ | ಭರತ್ ಶರ್ಮ |
| ಗುಂಡಪ್ಪ ಕೆ. | ಅರುಣ್ ವಿ. |
| ಲೀಲಾವತಿ ಜಿ. | ಸುಮಾ ಅರುಣ್ |
| ಗುರುಪ್ರಸನ್ನ ಜಿ. | ಸೂರಜ್ ಅರುಣ್ |
| ಶ್ರೀನಿವಾಸನ್ ಎ.ವಿ. | ಅನ್ನಪೂರ್ಣ ವಿ. |
| ಗೋವಿಂದಪ್ರಸಾದ್ ಬಿ.ಎನ್. | ಅರುಣ್ ಕೆ.ಎಸ್. |
| ಕುಮಾರ್ ಬಿ.ಎನ್.ಜಿ. | ಶಂಕರ ಪ್ರಸಾದ್ ಬಿ.ಆರ್. |
| ಶ್ರೀರಾಮ್ ಬಿ.ಜಿ. | ಅಕ್ಷಯ್ ಅತ್ರೇಯ ಬಿ.ಎಸ್. |
| ವಾಸು ಎಸ್. | ಸೋಮಸುಂದರ್ ಎಸ್. |
| ಶೇಷಾದ್ರಿ ಬಿ.ವಿ. | ಚಂದ್ರಶೇಖರ್ ಎಸ್. |
| ರಾಧ ನಾಗಭೂಷಣ | ರಘುನಂದನ್ ಎಸ್. |
| ಅಶೋಕ ವಿ. | ಡಾ. ರಮಾದೇವಿ ಎಸ್. |
| ರಮೇಶ್ ಆರ್. | ನಾಗೇಶ್ ಟಿ.ಎಸ್. |
| ರಾಜಲಕ್ಷ್ಮಿ ಆರ್. | ಪ್ರಸಾದ್ ಜಿ.ಎನ್. |
| ರಂಗನಾಥ ಪ್ರಸಾದ್ | ಮಣಿ ವಿ.ಎಸ್. |
| ರಾಮೇಶ್ವರ ಪ್ರಸಾದ್ | ವೆಂಕಟಗಿರಿಯಪ್ಪ ಆರ್.ಎಸ್. |
| ಎಚ್.ಪಿ. ಶ್ರೀನಿವಾಸ್ | ಮಾತಂಗ ಶೇಷಗಿರಿ |
| ಹೆಚ್.ಎಸ್. ಪರಮೇಶ್ವರ | ಯಶೋಧರ ಉಡುಪ |
| ಟಿ.ಪಿ. ಸೂರ್ಯನಾರಾಯಣ | ಭಾಸ್ಕರ್ ಡಿ.ಎಸ್. |
| ನಾಗಪದ್ಮ | ನಾಗವೇಣಿ ಭಾಸ್ಕರ್ |
| ಎಸ್. ಸತ್ಯನಾರಾಯಣ | ನಿತಿನ್ ಭಾಸ್ಕರ್ |
| ವೇಣುಗೋಪಾಲ್ ಎಚ್.ಪಿ. | ಪೂರ್ಣಿಮಾ ಎಸ್. |
| ಶ್ರೀನಿವಾಸ್ ಎಸ್.ಸಿ. | ನಕುಲ್ ಭಾಸ್ಕರ್ |
| ಮಂಜುಳಾ ಟಿ.ಆರ್. | ಅನಂತ ಕೆ.ಎಸ್. |
| ರಾಹುಲ್ ಶ್ರೀನಿವಾಸ್ | ಉಮೇಶ್ ಟಿ.ಎನ್. |
| ರಾಘವಪ್ರಸಾದ್ ಎಸ್.ಸಿ. | ಮಧುರ್ ಕಶ್ಯಪ್ |
| ವೀಣಾ ಪಿ. | ಮಂಜುನಾರಾಯಣ ಕೆ. |
| ಧಾತ್ರಿ ಆರ್. ಪ್ರಸಾದ್ | ವನಿತಾ ಮಂಜುನಾರಾಯಣ |
| ಗಣೇಶ್ ಶ್ರೀಧರ್ ಆರ್. | ನಳಿನಿ ಎಸ್. |
| ರೂಪಶ್ರೀ ಎಂ. | ಸುಬ್ರಹ್ಮಣ್ಯಂ ಬಿ. |
| ಅಭಯ್ ಗಣೇಶ್ | ಶಶಿಧರ್ ಹೆಚ್.ಕೆ. |

## ಅಹಂಭೋ ಅಭಿವಾದಯೇ



**ಸ**ತ್ಕಾಲದಲ್ಲಿ ಉಪನಯನ ಆದ ವಟುವಿಗೆ ಅಂದಿನ ದಿನ ಗಾಯತ್ರಿ ಮಂತ್ರದ ಉಪದೇಶ ಹಾಗೂ ಗೋತ್ರ ಪ್ರವರಗಳ ಭೋದನೆ ಮಾಡುವುದು ಸಂಪ್ರದಾಯ.

ಗೋತ್ರ ಪ್ರವರಗಳನ್ನು ಹೇಳುವುದು ತನ್ನ ಋಷಿ ಪರಂಪರೆಯ ಮೂಲಕ ನಮಸ್ಕರಿಸಿ, ಪ್ರಾರ್ಥಿಸಿ ತನ್ನ ಪರಿಚಯ ಮಾಡಿಕೊಳ್ಳುವ ವಿಧಾನ. ಇಂದಿನ ದಿನಗಳಲ್ಲಿ ಹೇಗೆ ತಮ್ಮ contact details, email ID ಗಳನ್ನು share ಮಾಡಿಕೊಳ್ಳುವಂತೆ, ಅಂದಿನ ದಿನಗಳಲ್ಲಿ ನಾಮ, ಗೋತ್ರ ಪ್ರವರಗಳ ಮೂಲಕ ತನ್ನ ಪರಿಚಯ ಮಾಡಿಕೊಳ್ಳುವ ವಿಧಾನ. ಇಲ್ಲಿ ಯಾವುದೇ ಕಾರಣಕ್ಕೂ ಪುರುಷರ ಗೋತ್ರ ಪ್ರವರಗಳು ಬದಲಾಗುವುದಿಲ್ಲ, ಹಾಗಾಗಿ ತಾನು ಜೀವನ ಪರ್ಯಂತ ಗೊತ್ರ, ಪ್ರವರಗಳ ವಿವರಗಳನ್ನು ತಿಳಿದುಕೊಂಡು ಜ್ಞಾಪದಲ್ಲಿಟ್ಟುಕೊಳ್ಳುವುದು ಅವಶ್ಯಕ.

ಗೋತ್ರಗಳು ತಲತಲಾಂತರದಿಂದ ಬಂದಂತಹ ಋಷಿಗಳ ಪರಂಪರೆ. ಅವುಗಳು ತಮ್ಮ ತಮ್ಮ 'ಮೂಲ ಪುರುಷ – ಋಷಿಗಳು' ಅವರ ಮಕ್ಕಳು, ಅಥವಾ ಮೂಲ ಋಷಿಗಳ ಶಿಷ್ಯರ ಮುಂದುವರೆದ ಪರಂಪರೆ, ಹೀಗೆ ಎರಡು ರೀತಿಯಲ್ಲಿಯೂ ಋಷಿ ಪರಂಪರೆಯ ಮುಂದುವರಿಕೆಯ ಸಾಧ್ಯತೆ ಉಂಟು.

ಒಂದೇ ಸಮುದಾಯಕ್ಕೆ ಸೇರಿದವರಲ್ಲಿ ಗೋತ್ರಗಳು ಬೇರೆ ಬೇರೆಯಾಗಿರುವುದು ಸಾಮಾನ್ಯ. ಉದಾಹರಣೆಗೆ ನಮ್ಮ 'ಬೃಹಚ್ಚರಣರು' ಒಂದು ಸಮುದಾಯದಕ್ಕೆ ಸೇರಿದವ ರಾದರೂ, ಕುಟುಂಬಕ್ಕೆ ಅನುಗುಣವಾಗಿ ಬೇರೆ ಬೇರ ಗೋತ್ರಗಳಿಗೆ ಸೇರಿರುತ್ತಾರೆ. ಹಾಗಾಗಿ ಒಂದೇ ಸಮುದಾಯ ದವರು ವಿವಾಹ ಕಾರ್ಯಗಳಿಗಾಗಿ ಸಮುದಾಯದ ಬೇರೆ ಬೇರೆ ಗೋತ್ರಗಳ ವಧು, ವರರನ್ನು ಆಯ್ಕೆ ಮಾಡಿ ಕೊಳ್ಳುವುದು ಸುಲಭ ಸಾಧ್ಯ.

### ಅಭಿವಾದಯೇ

'ಅಭಿವಾದಯೇ' ಗುರು ಹಿರಿಯರಿಗೆ ನಮಸ್ಕರಿಸುವ ಸಂಪ್ರದಾಯ ಬದ್ಧ ವಿಧಾನ. ವಟು ತನ್ನ ಎರಡು ಕೈಗಳ ಹಸ್ತಗಳನ್ನು ತನ್ನ ಎರಡು ಕಿವಿಗಳನ್ನು ಮುಚ್ಚಿಕೊಂಡು ಏಕಾಗ್ರ ಚಿತ್ತನಾಗಿ (ಎಡಗೈಯಿಂದ ಎಡ ಕಿವಿಯನ್ನು, ಬಲಗೈಯಿಂದ ಬಲ ಕಿವಿಯನ್ನು, – ಹಲವರು ಇದನ್ನು ಅದಲುಬದಲು ಮಾಡಿಕೊಳ್ಳುವುದು ಉಂಟು, ಹಾಗಾಗಿ ಇಲ್ಲಿ ಯಾವುದು ಸರಿ ಎಂಬ ತರ್ಕ ಅನವಶ್ಯಕ) ಹಿರಿಯರ ಪಾದದ ಅಂಗುಷ್ಟದ ಬೆರಳನ್ನು ಮುಟ್ಟಿ (ಇಲ್ಲಿ ಬಲಗೈ ಹಸ್ತವನ್ನು ಗುರು ಹಿರಿಯರ ಬಲ ಪಾದದ ಅಂಗುಷ್ಟ, ಮತ್ತು ಎಡಗೈ ಹಸ್ತವನ್ನು ಅವರ ಎಡ ಅಂಗುಷ್ಟವನ್ನು ಮುಟ್ಟು ವಂತಿರಬೇಕು, ಅಂದರೆ ಅದು ಕತ್ತರಿಯ ರೂಪದಲ್ಲಿ, ತನ್ನ ಎಡಗೈ ಮೇಲೆ, ಬಲಗೈ ಬರುವಂತಿರ ಬೇಕು). ಉಪನಯನ ಆದ ನಂತರ ವಟು ಮುಖ್ಯವಾಗಿ ಗುರು ಹಿರಿಯರಿಗೆ ಗೋತ್ರ ಪ್ರವರ, ನಾಮವನ್ನು ಹೇಳಿ ನಮಸ್ಕರಿಸಿ ಆಶೀರ್ವಾದ ಪಡೆದುಕೊಳ್ಳುವುದು ಸಂಪ್ರದಾಯ.

ಪ್ರತಿದಿನ ಸಂಧ್ಯಾವಂದನೆ ಮಾಡುವಾಗ ಗೋತ್ರ ಪ್ರವರಗಳು ಹೇಳುವ ಮೂಲಕ, ನಮ್ಮನ್ನು ಅಗಲಿದ ಹಿರಿಯರಿಗೆ, ನಮ್ಮ ಋಷಿ ಪರಂಪರೆಗೆ ನಾವು ಸಲ್ಲಿಸತಕ್ಕ ಕೃತಜ್ಞತೆಯೂ ಹೌದು.

ಬೇರೆ ಬೇರೆ ಗೋತ್ರಗಳ ಋಷಿ ಪರಂಪರೆಯ ವಿವರಣೆ ತಿಳಿದುಕೊಳ್ಳುವ ಪ್ರಯತ್ನ ಮಾಡೋಣ.

### ಅಹಂಭೋ ಅಭಿವಾದಯೇ – ಭಾಗ 2

ವೇದಗಳು, ಉಪನಿಷತ್ತುಗಳ ಕಾಲದಲ್ಲಿ ನಮ್ಮ ಭರತ ಭೂಮಿಯಲ್ಲಿ ಇದ್ದ ಪ್ರತಿಯೊಬ್ಬರೂ 'ವೈದಿಕರು' ಮಾತ್ರವೇ.

ವೈದಿಕರು ಎಂದ ತಕ್ಷಣ ಅವರು ವೈದಿಕ ಬ್ರಾಹ್ಮಣರು ಆಗಬೇಕೆಂದಿಲ್ಲ. ಯಾರು ವೇದಗಳ ಕಾಲದ, ಯಾವುದೇ ಪರಂಪರೆಯಲ್ಲಿ ಹುಟ್ಟಿ ವೇದಗಳಿಗೆ ಅನುಸಾರವಾದ ಪೂಜೆ, ದೇವತಾರ್ಚನೆ, ಯಜ್ಞ, ಹೋಮ, ಹವನಗಳ ಸಂಪ್ರದಾಯಗಳನ್ನು ಆಚರಿಸುತ್ತಿದ್ದರೋ, ಅವರೆಲ್ಲರೂ ವೈದಿಕರು. ಇಲ್ಲಿ ಜಾತಿ, ವರ್ಣ–ಕುಲಕಸುಬುಗಳಿಗೆ ಆಸ್ಪದ ವಿಲ್ಲದ ಕಾರಣ ವೈದಿಕ ಸಂಪ್ರದಾಯಗಳು ಮಾತ್ರವೇ ಮುಖ್ಯವಾದದ್ದು ಅಥವಾ ಎಲ್ಲರನ್ನೂ ಸರಳವಾಗಿ "ಹಿಂದುಗಳು" ಎನ್ನಬಹುದು.

ಸನಾತನ ಧರ್ಮದ ಪ್ರಾರಂಭದಲ್ಲಿ ಎಂಟು ಋಷಿ ಸಂತತಿಯ ಮೂಲಪುರುಷರು ಇದ್ದರೆಂದೂ, ಅವರಿಗೆ ಸಂಬಂಧಿಸಿದ ಎಂಟು ಗೋತ್ರಗಳು ಮಾತ್ರ ಇದ್ದುವೆಂದೂ ಹೇಳಲಾಗುತ್ತದೆ. ಈ ಎಂಟು ಜನ ಮೂಲಪುರುಷ ಋಷಿಗಳಾದ....

ಕಶ್ಯಪ, ವಸಿಷ್ಠ, ಅಗಸ್ತ್ಯ, ಭೃಗು, ಗೌತಮ, ಭಾರದ್ವಾಜ, ಅತ್ರಿ ಮತ್ತು ವಿಶ್ವಾಮಿತ್ರ ಎಂಬ ಎಂಟು ಮೂಲ ಋಷಿ

ಸಂತತಿಯವರು. ಸಂಪ್ರದಾಯದಂತೆ, ಇವರು ಬ್ರಹ್ಮನ ಎಂಟು ಮಾನಸಪುತ್ರರೆಂದು ಹೇಳಲಾಗುತ್ತದೆ. ಹಾಗಾಗಿ ಈ ಎಂಟು ಋಷಿ ಸಂತತಿಯ ಪರಂಪರೆಯಿಂದ ಎಂಟು ಬ್ರಾಹ್ಮಣರ ಮೂಲ ಗೋತ್ರಗಳ ಉಗಮ ಎನ್ನಬಹುದು.

ನಂತರದ ದಿನಗಳಲ್ಲಿ ಈ ಮೂಲ–ಋಷಿಗಳ ಸಂತತಿ ಯವರು, ಋಷಿಗಳ ಮಕ್ಕಳು ಅಥವಾ ಶಿಷ್ಯರು ಮುಂದುವರೆದ ಸಂತತಿಯಂತೆ ಅನೇಕ ಕವಲೊಡೆದು ಹೊಸದಾದ ಗೋತ್ರಗಳು ಹುಟ್ಟಿಕೊಂಡಿತು. ಅದಕ್ಕೆ ಅನುಗುಣ ವಾಗಿ, ಕುಟುಂಬಗಳು, ಋಷಿಗಳ ಗೋತ್ರಗಳ ಪ್ರಕಾರವಾಗಿ ಚರಣೆ, ಸಂಪ್ರದಾಯಗಳನ್ನು ಅನುಸರಿಸುವಂತಾಯಿತು.

ಉದಾಹರಣೆಗೆ, ಬ್ರಾಹ್ಮಣ ಸಮುದಾಯದ ಬಂಧುಗಳ ಕೆಲವು ಗೋತ್ರಗಳನ್ನು ತಿಳಿಯೋಣ.

**1. ಕಾಶ್ಯಪ ಗೋತ್ರ**

ಈ ಗೋತ್ರದಲ್ಲಿ ಮೂರು ಋಷಿಗಳ ಪರಂಪರೆಯಲ್ಲಿ ಬರುವಂತಹ (1) ಕಾಶ್ಯಪ (2)ಆವತ್ಸಾರ (3)ಆಸಿತ / ನೈದೃವ ಋಷಿ ತ್ರಯರನ್ನು ನೆನೆದು, ನಮಿಸಿ ಪ್ರವರ ಹೇಳತಕ್ಕದ್ದು.

ಹೀಗೆ ಬೇರೆ ಬೇರೆ ಋಷಿಗಳ ಪರಂಪರೆಯಲ್ಲಿ ಗೋತ್ರಗಳನ್ನು ತಿಳಿಯೋಣ.

**2. ಕುತ್ಸಸ ಗೋತ್ರ**

ಇದರಲ್ಲಿ ಮೂರು ಉಪ ವಿಭಾಗವು ಉಂಟು.

a) ಆಂಗೀರಸ, ಅಂಬರೀಷ, ಯೌವನಾಶ್ವ.

b) ಮಾಂಧಾತ್ರ, ಅಂಬರೀಷ, ಯೌವನಾಶ್ವ.

c) ಆಂಗೀರಸ, ಮಾಂಧಾತ್ರ ಮತ್ತು ಕೌತ್ಸ.

**3. ಕಪಿಲಸ ಗೋತ್ರ**

ಆಂಗೀರಸ, ಆಮಹೀಯವ, ಮತ್ತು ಔರುಕ್ಷಯ.

**4. ಕೌಂಡಿನ್ಯ ಗೋತ್ರ**

ವಾಶಿಷ್ಠ, ಮೈತ್ರಾವರುಣ, ಮತ್ತು ಕೌಂಡಿನ್ಯ.

**5.ಆತ್ರೇಯಸ ಗೋತ್ರ**

ಆತ್ರೇಯ, ಆರ್ಚನಾಸನ, ಶ್ವಾವಾಶ್ವ.

ಕೆಲವರಲ್ಲಿ "ಈಶಾವಾಸ್ಯ" ಋಷಿಯ ಉಲ್ಲೇಖವಿದೆ. (ಪ್ರಾಯಶಃ, ಶ್ವಾವಾಶ್ವರೇ ಈಶಾವಾಸ್ಯರು ಇರಬಹುದು. ಹೆಚ್ಚಿನ ವಿವರಗಳನ್ನು ಪಡೆಯುವಲ್ಲಿ ವಿಫಲನಾಗಿದ್ದೇನೆ.)

**6. ಆತ್ರೇಯ ಗೋತ್ರ**

ಇದು ಪಂಚಾರ್ಷೇಯ ಋಷಿಗಳ ಪರಂಪರೆ. ಆಂಗೀರಸ, ಬಾರ್ಹಸ್ಪತ್ಯ, ಭಾರದ್ವಾಜ, ಶೈನ್ಯ ಮತ್ತು ಗಾರ್ಗ್ಯ ಎಂಬ ಐದು ಋಷಿಗಳು.

**7. ಶ್ರೀವತ್ಸ ಗೋತ್ರ**

ಭಾರ್ಗವ, ಚ್ಯಾವನ, ಆಪ್ನವಾನ, ಔರ್ವ, ಶ್ರೀವತ್ಸ – ಐದು ಋಷಿಗಳು.

**8. ವಿಶ್ವಾಮಿತ್ರ ಗೋತ್ರ**

ವಿಶ್ವಾಮಿತ್ರ, ದೇವರಾತ, ಮತ್ತು ಔದಲ.

ಪ್ರವರವನ್ನು ಹೇಳುವ ವಿಧಾನ.


ಚತುಸ್ಸಾಗರ ಪರ್ಯಂತಮ್ ಗೋ ಬ್ರಾಹ್ಮಣೇಭ್ಯಃ, ಶುಭಂ ಭವತು................ ಪಂಚಾರ್ಷೇಯ / ತ್ರಯಾ ಋಷೇಯ ಪ್ರವರಾನ್ವಿತ............ ಗೋತ್ರಃ, ............ ಸೂತ್ರ, .......... ಶಾಖಾಧ್ಯಾಯೀ, ಶ್ರೀ......... ಶರ್ಮ, ಅಥವ ಶರ್ಮಣಃ ಅಹಂಭೋ ಅಭಿವಾದಯೇ... ಎಂಬ ಅವರವರ ಗೋತ್ರ ಪ್ರವರಗಳನ್ನು ಖಾಲಿ ಇರುವ ಜಾಗದಲ್ಲಿ ತುಂಬಿಸಿಕೊಳ್ಳತಕ್ಕದ್ದು.

ಕ್ಷಮೆ ಇರಲಿ –

ಮೇಲೆ ತಿಳಿಸಿದ ಕೆಲವು ಋಷಿ ಪರಂಪರೆಯಲ್ಲಿ ವ್ಯತ್ಯಾಸಗಳು ಕಂಡು ಬಂದಲ್ಲಿ ದಯವಿಟ್ಟು ಅದಕ್ಕನುಗುಣ ವಾಗಿ ತಿದ್ದುಪಡಿ ಮಾಡಿಕೊಳ್ಳತಕ್ಕದ್ದು.

ಮುಂದಿನ ಲೇಖನದಲ್ಲಿ ಪ್ರವರಗಳನ್ನು ಹೇಳುವ ಉದ್ದೀಶ್ಯ ಏನೆಂಬುದನ್ನು ತಿಳಿಯುವ ಪ್ರಯತ್ನ ಮಾಡೋಣ.

ಧನ್ಯವಾದಗಳು.



◆ **ವಿ.ಎಸ್.ಮಣಿ**
**9845055582**

**ಎಸ್.ಎಸ್.ಎಲ್.ಸಿ.ಯಲ್ಲಿ ಉತ್ತಮ ಅಂಕಗಳಿಸಿರುವ ನಮ್ಮವರು**

ಸದಸ್ಯ ಶ್ರೀ ವಿ. ನರಸಿಂಹನ್ ಹಾಗೂ ಶ್ರೀಮತಿ ಪೂರ್ಣಿಮಾ ರವರ ಪುತ್ರ **ವಿವೇಕ್**

ಸದಸ್ಯ ಶ್ರೀ ಪ್ರಸಾದ್ ಹಾಗೂ ಶ್ರೀಮತಿ ಸುಜಯರವರ ಪುತ್ರಿ **ಪೂರ್ವಿಪ್ರಸಾದ್**

ಸದಸ್ಯ ಶ್ರೀ ಪ್ರಶಾಂತ ಹಾಗೂ ಶ್ರೀಮತಿ ನಳಿನಿರವರ ಪುತ್ರ **ಆದಿತ್ಯರಾಮ**

ಸದಸ್ಯ ಶ್ರೀ ರಾಮಚಂದ್ರ ಹಾಗೂ ಶ್ರೀಮತಿ ಗೀತಾರವರ ಪುತ್ರ **ಶಶಾಂಕ ಆರ್.**

ಸದಸ್ಯ ಶ್ರೀ ನಾಗಭೂಷಣ ಅವರ ಪುತ್ರಿ **ಸಾಯಿಶ್ರುತಿ**

# ಮಹಾ ಶಿವರಾತ್ರಿಯ ಮಹತ್ವ

ಮಹಾ ಶಿವರಾತ್ರಿಯ ಮಹತ್ವದ ಬಗ್ಗೆ ಅನೇಕ ವಿಭಿನ್ನವಾದ ಉಲ್ಲೇಖಗಳಿವೆ. ಅವುಗಳಲ್ಲಿ ಕೆಲವೊಂದು ಆಯ್ದ ಉಲ್ಲೇಖಗಳನ್ನು ತಿಳಿಸುವ ಪ್ರಯತ್ನ.

1. ಬ್ರಹ್ಮ, ವಿಷ್ಣು, ಮಹೇಶ್ವರ, ಈ ಮೂವರು ಕ್ರಮವಾಗಿ ಸೃಷ್ಟಿ, ಸ್ಥಿತಿ, ಲಯಗಳಿಗೆ ಅಧಿಪತಿಗಳಾದ ತ್ರಿಮೂರ್ತಿಗಳು. ವಿಷ್ಣು ಮತ್ತು ಮಹೇಶ್ವರರು ಪೂಜನೀಯರು. ಇವರುಗಳಿಗೆ ದೇಶ, ವಿದೇಶಗಳ ವ್ಯಾಪ್ತಿಯಲ್ಲಿ ದೇವಾಲಯಗಳುಂಟು. ಆರಾಧಿಸುವ ಭಕ್ತರಿಗೆ ಎಣೆಯಿಲ್ಲ. ಆದರೆ ಬ್ರಹ್ಮನಿಗೆ ಅಲ್ಲೋ ಇಲ್ಲೋ ಬೆರಳೆಣಿಕೆಯಷ್ಟು ದೇವಾಲಯಗಳು ಮಾತ್ರ. ಬ್ರಹ್ಮನಿಗೆ ಪೂಜೆಗಳು ಸಹಾ ಅಷ್ಟಕ್ಕಷ್ಟೇ.

ತ್ರಿಮೂರ್ತಿಗಳಲ್ಲಿ ವಿಷ್ಣು, ಮಹೇಶ್ವರರಂತೆ, ಬ್ರಹ್ಮನಿಗೆ ಮಾತ್ರವೇ ಏಕೆ ಪೂಜೆಗಳಿಲ್ಲ?

**ಚತುರ್ಮುಖ ಬ್ರಹ್ಮ :** ಬ್ರಹ್ಮನು ವಿಷ್ಣುವಿನ ನಾಭಿಯಿಂದ ಹೊರಹೊಮ್ಮಿದ ತಾವರೆಯ ಹೂವಿನ ಮೇಲೆ ಕುಳಿತಿರುತ್ತಾನೆ. ಸರಸ್ವತಿಯು ಬ್ರಹ್ಮನ ಪತ್ನಿ. ನಾರದರು ಬ್ರಹ್ಮನ ಮಾನಸ ಪುತ್ರ.

**ಪುರಾಣಗಳ ಉಲ್ಲೇಖ :** ಅದೊಂದು ಮಾಘ ಮಾಸ, ಕೃಷ್ಣ ಪಕ್ಷದ, ಚತುರ್ದಶಿ. ಅಂದು ಮಹಾಶಿವರಾತ್ರಿಯ ಆಚರಣೆಯ ದಿನ. ಪರಮೇಶ್ವರ ತಾನು ಜ್ವಲಲಸ್ಥಂಭ ರೂಪದಲ್ಲಿ ಮುಗಿಲೆತ್ತರಕ್ಕೆ ತನ್ನ ರೂಪವನ್ನು ಪ್ರಕಟಿಸಿದ ಸಮಯ. ಲಿಂಗಾಕೃತಿಯ ಶಿರದ ಭಾಗವು ಎಲ್ಲೆ ಮೀರಿದ ಎತ್ತರದಲ್ಲಿ ಕಣ್ಣಿಗೆ ಕಾಣದಷ್ಟು ಅನಂತವಾದ ಎತ್ತರದಲ್ಲಿತ್ತು. ಅಂದು ಆ ಮಾರ್ಗದಲ್ಲಿ ಜೊತೆಯಾಗಿ ಸಂಚರಿಸುತ್ತಿದ್ದ ಮಹಾ ವಿಷ್ಣು ಮತ್ತು ಬ್ರಹ್ಮದೇವರು ಪರಶಿವನ ರೂಪವನ್ನು ಕಂಡು ದಿಗ್ಭ್ರಾಂತರಾಗಿ ಶಿವನಿಗೆ ನಮಿಸಿದರು.

**ಮಹಾವಿಷ್ಣು , ಬ್ರಹ್ಮದೇವರಿಗೆ ಉಂಟಾದ ಕುತೂಹಲ :** ಮಹೇಶ್ವರನ ಅಗಾಧವಾದ ಜ್ವಲಲ ರೂಪವನ್ನು ನೋಡಿದ ವಿಷ್ಣು, ಬ್ರಹ್ಮರಿಗೆ, ಲಿಂಗರೂಪಿಯಾದ ಪರಶಿವನ ಎತ್ತರ ಎಷ್ಟಿರಬಹುದು ಎಂಬ ಕುತೂಹಲ ಉಂಟಾಯಿತು. ಅವರಿಬ್ಬರಲ್ಲಿ ತರ್ಕ ಪ್ರಾರಂಭವಾಯಿತು. ನಮ್ಮಿಬ್ಬರಲ್ಲಿ ಯಾರು ಲಿಂಗರೂಪಿಯಾರ ಪರಶಿವನ ಎತ್ತರ ಹಾಗೂ ಆಳವನ್ನು ಕರಾರುವಕ್ಕಾಗಿ ತಿಳಿಸುತ್ತಾರೋ? ಅವರೇ ನಮ್ಮಲ್ಲಿ ಶ್ರೇಷ್ಠರು, ಎಂಬ ತೀರ್ಮಾನಕ್ಕೆ ಬಂದರು.



**ಅಳತೆಯ ಅನ್ವೇಷಣೆ ಪ್ರಾರಂಭ :** ಬ್ರಹ್ಮನು ಭೂಮಿಯ ಮೇಲಿಂದ ಶಿವಲಿಂಗದ ಎತ್ತರವನ್ನು ಅಳೆಯಲು ಹಂಸ ಪಕ್ಷಿಯ ರೂಪವನ್ನು ತಾಳಿದ. ವಿಷ್ಣುವು ಭೂಮಿಯ ಒಳಗಡೆಯಲ್ಲಿ ಇರುವ ಶಿವಲಿಂಗದ ಆಳವನ್ನು ಅಳೆಯಲು ವರಾಹ ರೂಪವನ್ನು ತಾಳಿದ. ಬ್ರಹ್ಮನು ಭೂಮಿಯಿಂದ ಆಗಸದ ಕಡೆಗೆ ಶಿವಲಿಂಗದ ತುದಿಯನ್ನು ಮುಟ್ಟಲು ಹಂಸರೂಪದಲ್ಲಿ ಮೇಲಕ್ಕೆ ಹಾರಲು ಪ್ರಾರಂಭಿಸಿದ. ವಿಷ್ಣುವು ಭೂಮಿಯ ಒಳಗಿರುವ ಶಿವಲಿಂಗದ ಅಂತ್ಯಭಾವನ್ನು ತಲುಪಲು ವರಾಹ ರೂಪದಲ್ಲಿ ಭೂಮಿಯನ್ನು ಕೊರೆಯಲು ಪ್ರಾರಂಭಿಸಿದ. ಒಂದು ಹಂತದಲ್ಲಿ ವಿಷ್ಣುವು ತನ್ನ ಪ್ರಯತ್ನದಲ್ಲಿ ವಿಫಲವಾಗಿ, ಶಿವಲಿಂಗದ ಅಂತ್ಯಭಾಗವನ್ನು ತಲುಪಲು ಸಾಧ್ಯವಿಲ್ಲ ಎಂದೆಣಿಸಿ, ಭೂಮಿಯ ಮೇಲ್ಭಾಗಕ್ಕೆ ಹಿಂತಿರುಗಿ ಬಂದ. ತನ್ನ ಪ್ರಯತ್ನದ ಸೋಲನ್ನು ಒಪ್ಪಿಕೊಂಡ.

ಹಂಸ ರೂಪದಲ್ಲಿ ಬ್ರಹ್ಮ ಹಾರುವ ಪ್ರಯತ್ನ ಮುಂದುವರೆಸಿದ, ಆದರೆ ಲಿಂಗದ ತುದಿ ಕಾಣಲಿಲ್ಲ. ಮತ್ತೆ ಹಾರಲು ಮುಂದುವರೆದ.

ಅಷ್ಟರಲ್ಲಿ ಮೇಲಿಂದ ಒಂದು ಕೇದಿಗೆ ಹೂ (ತಾಳೇಹೂ) ಭೂಮಿಯತ್ತ ಕೆಳಗೆ ಬರುತ್ತಿರುವುದನ್ನು ಕಂಡ.

ಕೇದಿಗೆ ಹೂ ಬ್ರಹ್ಮನ ಸಮೀಪ ಬಂದೊಡನೆ, ನೀನು ಎಲ್ಲಿಂದ ಬರುತ್ತಿದ್ದೀಯಾ? ಎಂದು ಬ್ರಹ್ಮ ಪ್ರಶ್ನಿಸಿದ.

ಅದಕ್ಕೆ ಆ ಕೇದಿಗೆಯ ಪುಷ್ಪವು, ನಾನು ಶಿವನ ತಲೆಯ ಮೇಲಿದ್ದೆ, ಆಕಸ್ಮಿಕವಾಗಿ ಶಿವನ ತಲೆಯಿಂದ ಜಾರಿಬಿದ್ದು

ಭೂಮಿಯತ್ತ ಹೋಗುತ್ತಿದ್ದೇನೆ. ಶಿವನ ತಲೆಯಿಂದ ಜಾರಿ ಬಿದ್ದ ನಾನು ಭೂಮಿಯನ್ನು ತಲುಪಲು ಎಷ್ಟೋ ಸಹಸ್ರಾರು ವರ್ಷಗಳಿಂದ ಪ್ರಯಾಣ ಮಾಡುತ್ತಿದ್ದೇನೆ ಎಂದಿತು.

ಇದನ್ನು ಅರಿತ ಬ್ರಹ್ಮನಿಗೆ, ಓಹೋ! ಇನ್ನು ಲಿಂಗದ ತುದಿಯನ್ನು ತಲುಪಲು ಅಸಾಧ್ಯ ಎನಿಸಿತು.

**ಬ್ರಹ್ಮನ ಸುಳ್ಳಿನ ಸೃಷ್ಟಿ :** ಬ್ರಹ್ಮನು ತನ್ನ ಜೊತೆ ಇದ್ದ ಕೇದಿಗೆಯ ಪುಷ್ಪವನ್ನು ಕುರಿತು, ನಿನ್ನಿಂದ ಒಂದು ಸಹಾಯ ವನ್ನು ಬಯಸುತ್ತೇನೆ, ದಯಮಾಡಿ ನಿರಾಕರಿಸಬೇಡ ಎಂದ.

ಸರಿ, ಸೃಷ್ಟಿಕರ್ತನಾದ ಬ್ರಹ್ಮನೇ ನನ್ನಲ್ಲಿ ಸಹಾಯ ಬೇಡುತ್ತಿರುವಾಗ, ನಾನೇಕೆ ನಿರಾಕರಿಸಲಿ? ಎಂದಿತು.

**ಬ್ರಹ್ಮ :** ನಾನು ಮತ್ತು ವಿಷ್ಣುವು ಒಂದು ಷರತ್ತು ಬದ್ಧ ವಿಚಾರದಲ್ಲಿ ಯಾರು ಹೆಚ್ಚು ಎಂಬುದು ನಿರ್ಣಯವಾಗ ಬೇಕಿದೆ.

ಲಿಂಗರೂಪದ ಪರಶಿವನ ಅಂತ್ಯಭಾಗವನ್ನು ತಲುಪಿ ಅಳೆಯಲು ವಿಷ್ಣುವು ಭೂಮಿಯ ಒಳಹೊಕ್ಕಿದ್ದಾನೆ, ನಾನು ಶಿವಲಿಂಗದ ಎತ್ತರವನ್ನು ಅಳೆಯಲು ಆಗಸದತ್ತ ಮೇಲಕ್ಕೆ ಹಾರುತ್ತಿದ್ದೇನೆ. ಈಗ ನನ್ನ ಪ್ರಯತ್ನ ಇಲ್ಲಿಗೇ ಕೈಬಿಟ್ಟು, ನಿಮ್ಮೊಂದಿಗೆ ಭೂಮಿಯತ್ತ ಹಿಂತಿರುಗುತ್ತೇನೆ.

ಆದರೆ, ನಾನು ಲಿಂಗದ ತುದಿ ತಲುಪಿದ್ದೇನೆ ಎಂದು ವಿಷ್ಣುವಿಗೆ ತಿಳಿಸುತ್ತೇನೆ. ಅದಕ್ಕೆ ನೀನು ಸುಳ್ಳಿನ ಸಾಕ್ಷಿಯಾಗ ಬೇಕು ಎಂದ.

**ಕೇದಿಗೆ :** ಸೃಷ್ಟಿಕರ್ತನಾದ ನಿನಗೆ ಸಹಾಯ ಮಾಡಲು ಒಂದು ಸುಳ್ಳು ಹೇಳಲು ಹಿಂಜರಿಯಲಾರೆ, ಆಯಿತು ಎಂದು ಒಪ್ಪಿಕೊಂಡಿತು. ಆ ನಂತರ ಬ್ರಹ್ಮ ಹಾಗೂ ಕೇದಿಗೆ ಭೂಮಿಯತ್ತ ಪ್ರಯಾಣಿಸಿದರು.

**ಭೂಮಿಗೆ ಹಿಂತಿರುಗಿದ ಬ್ರಹ್ಮ :** ಭೂಮಿಗೆ ಹಿಂತಿರುಗಿ ದಾಗ ಬ್ರಹ್ಮ, ಅಲ್ಲಿದ್ದ ವಿಷ್ಣುವನ್ನು ನೋಡಿ ನಿನ್ನ ಪ್ರಯತ್ನ ಏನಾಯಿತು? ಎಂದ.

**ವಿಷ್ಣು :** ವಿಫಲವಾದ ಪ್ರಯತ್ನವನ್ನು ವಿವರಿಸಿ ತಾನು ಸೋತೆ ಎಂಬುದಾಗಿ ತಿಳಿಸಿದ.

**ಬ್ರಹ್ಮ :** ನಾನು ಲಿಂಗರೂಪಿಯಾದ ಪರಶಿವನ ಲಿಂಗದ ತುದಿ ಮುಟ್ಟಿ ಹಿಂತಿರುಗಿದ್ದೇನೆ, ಇದಕ್ಕೆ ಸಾಕ್ಷಿ ಪರಶಿವನ ತಲೆಯಮೇಲಿದ್ದ ಈ ಕೇದಿಗೆ ಹೂವು ಇಲ್ಲಿದೆ ನೋಡು ಎಂದ.

ಅದಕ್ಕೆ, ಕೇದಿಗೆ ಹೌದೆಂದು ತಲೆಯಾಡಿಸಿ ಸುಳ್ಳು ಸಾಕ್ಷಿಯಾಯಿತು.

**ಉಗ್ರರೂಪಿಯಾದ ಪರಶಿವ :** ಇದನ್ನು ತಿಳಿದ ಪರಶಿವನು, ಸುಳ್ಳು ಹೇಳಿದ ಬ್ರಹ್ಮನೊಂದಿಗೆ ಕೋಪಗೊಂಡು ಇಂದಿನಿಂದ ಭೂಲೋಕದಲ್ಲಿ ನಿನ್ನನ್ನು ಪೂಜಿಸುವವರು ಯಾರೂ ಇಲ್ಲದಂತಾಗಲಿ, ನಿನಗೆ ದೇವಾಲಯಗಳು ಇಲ್ಲದಂತಾಗಲಿ ಎಂಬುವ ಶಾಪವನ್ನು ನೀಡುತ್ತಾನೆ. ಹಾಗಾಗಿ, ಕೇದಿಗೆಯ ಹುವ್ವನ್ನು ಶಿವನ ಪೂಜೆಗೆ ಸಮರ್ಪಿಸುವುದಿಲ್ಲ, ಒಂದು ವೇಳೆ ಸಮರ್ಪಿಸಿದರೂ, ಅದನ್ನು ಪರಶಿವ ಸ್ವೀಕರಿಸಲಾರ ಎಂಬ ಪ್ರತೀತಿ ಉಂಟು.

2. ಕೆಲವು ಪುರಾಣಗಳ ಪ್ರಕಾರ ಶಿವನು ಲಿಂಗರೂಪ ವನ್ನು ತಾಳಿದ್ದು ಮಹಾ ಶಿವರಾತ್ರಿಯಂದು.

3. ಸಮುದ್ರ ಮಂಥನದಲ್ಲಿ ಉತ್ಪತ್ತಿಯಾದ ಹಾಲಾಹಲ ವಿಷವನ್ನು ಪರಶಿವನು ಕುಡಿದು, ನೀಲಕಂಠನಾಗಿ ಸಕಲ ಸೃಷ್ಟಿಯ ನಾಶವನ್ನು ತಡೆದ ದಿನವೂ ಸಹಾ ಮಹಾ ಶಿವರಾತ್ರಿಯಂದು ಎಂಬ ಉಲ್ಲೇಖವೂ ಉಂಟು.

4. ಶಿವ ಪಾರ್ವತಿ ಕಲ್ಯಾಣದಲ್ಲಿ ಅರುಂಧತಿ, ವಸಿಷ್ಠರು. ಶಿವ ಪಾರ್ವತಿಯರ ವಿವಾಹ ನಡೆದದ್ದು ಮಾಹಾ ಶಿವರಾತ್ರಿಯಂದು. ಅಂದಿನ ವಿವಾಹದ ಸ್ವಾರಸ್ಯಕರ ಸಂಧರ್ಭವೆಂದರೆ, ಶಿವ ತಾನು ಸ್ವಯಂಭೂ, ತಾಯಿಯ ಗರ್ಭದಿಂದ ಜನಿಸಿದವನಲ್ಲ. ಹಾಗಾದರೆ ಶಿವನ ಮಾತಾ ಪಿತೃಗಳು ಯಾರು? ವಿವಾಹ ಸಂಧರ್ಭದಲ್ಲಿ ಮಾತಾ ಪಿತೃಗಳ ಪ್ರವರ ಗೋತ್ರಗಳ ಮೂಲ ಹೇಗೆ ಮತ್ತು ಶಿವನ ತಂದೆ ತಾಯಿಯರ ಸ್ಥಾನದಲ್ಲಿ ಅಲ್ಲಿ ನಿಂತವರು ಯಾರು.?

ಋಷಿ ಪರಂಪರೆಯಲ್ಲಿ ಶ್ರೇಷ್ಠರು, ಆದರ್ಶ ದಂಪತಿಗಳು ಎನಿಸಿದ ಮಹಾ ಪತಿವ್ರತೆ, 'ಅರುಂಧತಿ' ಹಾಗೂ ಬ್ರಹ್ಮ ಋಷಿಯಾದ 'ವಸಿಷ್ಠರು'. ಈ ಕಾರಣದಿಂದಾಗಿಯೇ, ಅರುಂಧತಿ ಹಾಗೂ ವಸಿಷ್ಠರನ್ನು ಅನ್ಯೋನ್ಯ ದಂಪತಿಗಳು ಎಂದು ಗುರುತಿಸಿ, ಇಂದಿಗೂ ದಕ್ಷಿಣ ಭಾರತದ ಬಹುತೇಕರು ವಿವಾಹದ ಸಂಧರ್ಭದಲ್ಲಿ ನವ ದಂಪತಿಗಳಿಗೆ ನಕ್ಷತ್ರ ಮಂಡಲದಲ್ಲಿ ಚಿರ ಸ್ಥಾಯಿಯಾಗಿರುವ ಅರುಂಧತಿ ಮತ್ತು ವಸಿಷ್ಠರ ದರ್ಶನ ಮಾಡಿಸುವ ಸಂಪ್ರದಾಯವಿದೆ.

ಈ ರೀತಿಯಾಗಿ ಶಿವರಾತ್ರಿ ಮಹಿಮೆಯನ್ನು ವಿವರಿಸಿರುವ ಅನೇಕ ಉಲ್ಲೇಖಗಳಿವೆ.

**◆ ಮಮತ ಶಿವಕುಮಾರ್**



# ಭಕ್ತ ಆಂಜನೇಯನ ರಾಮನವಮಿ ಆಚರಣೆ

ಗಂಧ ಮಾದನ ಪರ್ವತದಲ್ಲಿ ವಾಸವಾಗಿದ್ದ, ಚಿರಂಜೀವಿಯಾದ ಮಾರುತಿ, ಸದಾ ಶ್ರೀರಾಮಧ್ಯಾನ, ಸ್ಮರಣೆ ಹಾಗೂ ಭಜನೆಯಲ್ಲಿ ನಿರತನಾಗಿದ್ದ ಒಮ್ಮೆ ನಾರದರು ಆಗಮಿಸಿ, ಆಂಜನೇಯನನ್ನು ಕುರಿತು, "ದ್ವಾಪರಯುಗ ಬಂದಿದೆ. ಶ್ರೀಕೃಷ್ಣಾವತಾರವೂ ಪ್ರಾರಂಭ ವಾಗಿದೆ. ನೀನು ಇನ್ನೂ ತ್ರೇತಾಯುಗದಲ್ಲೇ ಇದ್ದೀಯಾ?" ಎಂದು ಕೇಳಿದಾಗ, ಆಂಜನೇಯ ನಾರದರ ಸಂವಾದ.

**ಆಂಜನೇಯ :** "ನನ್ನ ಪ್ರಭು ನನ್ನ ಬಳಿ ಇದ್ದಾನೆ. ಯಾವ ಯುಗ ಆದರೇನು?"

**ನಾರದರು :** "ಸರಿ, ನಾಳೆ ರಾಮನವಮಿ ಹೇಗೆ ಆಚರಿಸುತ್ತಿ?

**ಆಂಜನೇಯ :** ನಾಳೆ ಪೂಜೆ, ಭಜನೆ, ಸ್ಮರಣೆ, ಅನ್ನ ಸಂತರ್ಪಣೆ, ಪಾನಕ ಕೋಸಂಬರಿ ವಿತರಣೆ. ಇದೇ ನನ್ನ ಸೇವೆ. ಭಕ್ತಿ, ಭಾವದಿಂದ ಆಚರಿಸುವೆ.


**ನಾರದರು :** ನಿನ್ನ ಶ್ರೀರಾಮ, ಕೃಷ್ಣನಾಗಿ ದ್ವಾರಕಾಧೀಶ ನಾಗಿ ಇರುವನು. ನಾನು ಹೋಗಿ ನಿನ್ನ ಕೈಂಕರ್ಯದ ವಿಷಯವನ್ನು ಕೃಷ್ಣನಿಗೆ ತಿಳಿಸುವೆ.

**ಆಂಜನೇಯ :** ಬೇಡ ನನ್ನ ಸ್ವಾಮಿಯನ್ನು ತೊಂದರೆ ಪಡಿಸಬೇಡಿ. ನಾನು ದಾಸ, ಆತ ಈಶ, ದೈವ ಇದ್ದ ಕಡೆ ನಾವು ಹೋಗಬೇಕು. ಸೇವೆಗೈಯಬೇಕು.

ಎಂದರೂ ನಾರದರು ಸುಮ್ಮನಿರದೆ ಕೃಷ್ಣನಿಗೆ ಈ ವಿಷಯವನ್ನು ತಿಳಿಯಪಡಿಸಲಾಗಿ, ನಾರದ ಹಾಗೂ ಶ್ರೀಕೃಷ್ಣ ವೇಷ ಮರೆಸಿಕೊಂಡು, ಆಂಜನೇಯನ ಶ್ರೀರಾಮನವಮಿಯ ಆರಾಧನೆ ನೋಡಲು ಬಂದರು. ಪ್ರಸಾದ ಸ್ವೀಕರಿಸಲು ಭಕ್ತರ ಪಂಕ್ತಿಯಲ್ಲಿ ಕುಳಿತರು. ಪ್ರಸಾದ ವಿತರಿಸಲು ಬಂದ ಮಾರುತಿ ದೈವ ಸನ್ನಿದಾನದ ಆಕರ್ಷಣೆಗೆ ಒಳಗಾಗಿ ಚಲಿಸದೇ ಹಾಗೆಯೇ ನಿಂತ. ದೈವ, ಭಕ್ತ ಆಕರ್ಷಣೆ ಆಂತರ್ಯದಿ ಆ ರೀತಿ ಗೋಚರವಾಗಿತ್ತು.

ರೋಮ ರೋಮದಿ ರಾಮನಾಮವ ಧರಿಸಿದ ಭಕ್ತಗೆ ದೈವ ಜಾಗ್ರತೆ ಉಂಟಾಗಿ, ಪ್ರಣಾಮಗೈದು, ಆನಂದಾಶ್ರು ಕರೆದ. ಭಕ್ತ ಹಾಗೂ ದೈವದ ಮಿಲನವಾಯ್ತು. ದೈವದ ದರ್ಶನ ದಿಂದ ತೃಪ್ತಿ ಹಾಗೂ ಆನಂದವಾಯ್ತು ಆಂಜನೇಯನಿಗೆ ಶ್ರೀ ಆಂಜನೇಯನ ದಾಸ್ಯ ಭಾವಕಂಡು ನಾರದರು ಹರ್ಷಗೊಂಡರು ಹಾಗೂ ನಾಮದ ಮಹಿಮೆಯನ್ನು ತಿಳಿದುಕೊಂಡರು.

ಸಾಕಿದ ನಾಯಿಗೆ ತನ್ನ ಯಜಮಾನ ಯಾವ ವೇಷದಿ ಬಂದರೂ ಗುರುತು ತಿಳಿಯುತ್ತದೆ. ಹಾಗೆಯೇ ಭಕ್ತನಿಗೆ ದೈವವು ಯಾವ ರೂಪದಿ, ವೇಷದಿ ಬಂದರೂ ಆ ಸರ್ವ ವ್ಯಾಪಕನ, ಸರ್ವಜ್ಞನ, ಸರ್ವಶಕ್ತನ ಇರುವಿಕೆ ತಿಳಿಯುತ್ತದೆ. ಇದನ್ನೇ ಡಿ.ವಿ.ಜಿ.ಯವರು ತಮ್ಮ ಕಗ್ಗದಲ್ಲಿ ಈ ರೀತಿ ತಿಳಿಸಿದ್ದಾರೆ.



**ಸಾಮಾನ್ಯ ರೂಪದಲ್ಲಿ ಸಂಸಾರಿ ವೇಷದಲಿ ।**
**ಸ್ವಾಮಿ ನಿನ್ನೆಡೆಗೆ ಬರಬಹುದು ವರನೀಡಿ ।**
**ಮಹಿಮೆ ಕಾಂಬಲ್ಲಿ ಸಂಸ್ಕಾರವಿರಬೇಕು ।**
**ತಾಮಸಿಗೆ ವರದಲ್ಲಿ ಮಂಕುತಿಮ್ಮ ॥**

◆ **ಭ್ರಮರಾ ಗೋಪಿನಾಥ್**
6366701153



## ಅಭಿನಂದನೆಗಳು



ಮಂಡ್ಯಜಿಲ್ಲಾ ಡಾ. ರಾಜಕುಮಾರ್, ಕಲಾವೇದಿಕೆಯು ನಮ್ಮ ಸಂಘದ ಸದಸ್ಯ ಲಯ ವಿದ್ವಾನ್ ಶ್ರೀ ಆರ್.ಎಸ್. ಪ್ರಸಾಂತ್ ರವರಿಗೆ ಈ ಬಾರಿಯ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.



ಸಂಘದ ಹಿರಿಯ ಸದಸ್ಯ **ಶ್ರೀ ಎನ್. ಶ್ರೀನಿವಾಸ್** ರವರಿಗೆ ಜಿಗಣಿಯ ಶ್ರೀ ನಿತ್ಯನಂದಸ್ವಾಮಿ ವಿದ್ಯಾಸಂಸ್ಥೆ (ರಿ.) ವತಿಯಿಂದ ನಡೆದ ಗುರುವಂದನ ಕಾರ್ಯಕ್ರಮದಲ್ಲಿ (ದಿನಾಂಕ 26-01-21) ಗೌರವಿಸಲ್ಪಟ್ಟರು.



# ಕಲಾ ಚಿತ್ರಗಳು......








ಚಿತ್ರ – ಸೋನಿಯಾ ಶಿವರಾಂ

ಮದುಬನಿ ಕಲಾಚಿತ್ರಗಳು – ಶುಭಗಾಯತ್ರಿ







ಚಿತ್ರಗಳು – ಲಲಿತಾ ರಮೇಶ್


## ಬಾಲ ಕಲಾವಿದರು



ಕುಮಾರಿ ಪ್ರಿಯ



ಚಿ॥ ಸ್ಕಂದ ಪರಮೇಶ್



ಚಿ॥ ಸಮಾಹಿತ

## ಕರಕುಶಲ ಕಲೆ





ಕಲಾತ್ಮಕ ಕೈಬಳೆ ಹಾಗೂ ಪರ್ಸ್‌ಗಳು

-ನಳಿನಿ ಎಸ್.









ತರಕಾರಿ ಮತ್ತು ಹಣ್ಣುಗಳ ಕೆತ್ತನೆ ಕಲೆ

–ಅರ್ಜುನ್






*If undelivered please return to :*
*President*
**'Bruhacharana Sangha'**
No. 27/1, Bull Temple Road,
Basavanagudi,
Bengaluru - 560 004.

To,

Book-Post

Published by Sri B. Subramanyam, President, 'BRUHACHARANA SANGHA' No. 27/1, Bull Temple Road, Basavanagudi, Bengaluru - 560 004.
Printed at Keerthi Printers, Omkara, 240-F, 2nd D Cross, 2nd 'B' Main, Girinagar 1st Phase, Bengaluru - 560 085, Ph : 080-26722034